# ಆತ್ಮಪ್ರತಿಬೋಧ



ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ

ಅಧ್ಯಾತ್ಮಗ್ರಂಥಾವಳಿ

# ಆತ್ಮಪ್ರತಿಬೋಧ

(ಕೇನೋಪನಿಷದನುಸಾರವಾದ ಪ್ರವಚನಗಳು)

ಬರೆದವರು :

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೧೮೮

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

೨೦೦೧


**ಆತ್ಮಪ್ರತಿಬೋಧ**

ಮೊದಲನೆಯ ಮುದ್ರಣ ೧೯೭೦ (೧೦೦೦ ಪ್ರತಿಗಳು)
ಎರಡನೆಯ ಮುದ್ರಣ ೧೯೮೭ (೧೦೦೦ ಪ್ರತಿಗಳು)
ಮೂರನೆಯ ಮುದ್ರಣ ೨೦೦೧ (೨೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದ್ದು

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ.೨೧೩, ಬಾಲಾಜಿ ರಸ್ತೆ
ತ್ಯಾಗರಾಜನಗರ, ಬೆಂಗಳೂರು - ೨೮
ದೂರವಾಣಿ : ೬೭೬೭೦೧೬

ಮುದ್ರಕರು :
**ಗಣೇಶಮೂರುತಿ ಪ್ರಿಂಟರ್ಸ್**
ನಂ. [illegible], [illegible]ನೇ ಬ್ಲಾಕ್, ೬ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು - ೨೮
ದೂರವಾಣಿ : ೬೫೨೮೫೪೨



ದಿ|| ಕಮಲಮ್ಮ - ಕೃಷ್ಣಮೂರ್ತಿ

# ಮುನ್ನುಡಿ

ಚಿಕ್ಕಮಗಳೂರು ಶಾಖೆಯ ದಿವ್ಯಜೀವನಸಂಘದವರು ಶ್ರೀಪ್ರಸನ್ನ ಗಣಪತಿದೇವಾಲಯದಲ್ಲಿ ೧೯೭೦ನೆಯ ನವೆಂಬರ್ ಮಾಹೆಯಲ್ಲಿ ಏರ್ಪಡಿಸಿದ್ದ ವೇದಾಂತಪ್ರವಚನಗಳ ಸಪ್ತಾಹದ ಕಾಲಕ್ಕೆ ಬೆಳಗಿನ ವೇಳೆಯಲ್ಲಿ ವೇ|| ಲಕ್ಷ್ಮೀನರಸಿಂಹಮೂರ್ತಿಗಳವರು ನಡೆಯಿಸಿದ ಕೇನೋಪನಿಷತ್ತಿನ ಪ್ರವಚನಗಳನ್ನು ಚಿಕ್ಕಪುಸ್ತಕರೂಪದಲ್ಲಿ ಪ್ರಕಟಿಸಲಾಗಿತ್ತು. ಆ ಗ್ರಂಥದ ಪ್ರತಿಗಳೆಲ್ಲವೂ ಮಾರಾಟವಾಗಿ ಬಿಟ್ಟದ್ದರಿಂದ ಹೊಳೆನರಸೀಪುರದವರೇ ಆದ ಬೆಂಗಳೂರಿನಲ್ಲಿರುವ ಶ್ರೀ ಎನ್.ವಿ. ವೆಂಕಟಸುಬ್ಬಯ್ಯನವರು ಮತ್ತು ಅವರ ಸಹೋದರರು ತಮ್ಮ ಪೂಜ್ಯ ಮಾತಾಪಿತೃಗಳ ಜ್ಞಾಪಕಾರ್ಥವಾಗಿ ನೀಡಿದ ಉದಾರ ಧನಸಹಾಯದಿಂದ ೧೯೮೭ರಲ್ಲಿ ಎರಡನೆಯ ಬಾರಿಗೆ ಮುದ್ರಿಸಲ್ಪಟ್ಟಿತ್ತು.

ಅಧ್ಯಾತ್ಮಪ್ರಕಾಶಕಾರ್ಯಾಲಯದವರು, ಕಾರ್ಯಾಲಯದ ಕೃತಿಗಳೆಲ್ಲವೂ ಯಾವಾಗಲೂ ಜಿಜ್ಞಾಸುಗಳಿಗೆ ದೊರಕುತ್ತಿರಬೇಕೆಂಬ ಉದ್ದೇಶದಿಂದ ಮೂರನೆಯ ಬಾರಿಗೆ ಮುದ್ರಿಸಿ ಈಗ ಹೊರತರಲಾಗಿದೆ.

ಬೆಂಗಳೂರಿನ ಅಶೋಕನಗರದಲ್ಲಿ ವಾಸವಾಗಿರುವ ಕೈಗಾರಿಕೋದ್ಯಮಿಗಳಾದ ಶ್ರೀ ಕೆ. ವಸಂತಕುಮಾರ್ ಮತ್ತು ಕೆ. ಸಚ್ಚಿದಾನಂದ ದಂಪತಿಗಳು ತಮ್ಮ ಪೂಜ್ಯ ಮಾತಾಪಿತೃಗಳಾದ **ದಿ| ಕಮಲಮ್ಮ- ಕೃಷ್ಣಮೂರ್ತಿಗಳ** ನೆನಪಾಗಿ ಈ ಗ್ರಂಥ ಪ್ರಕಟಣೆಯ ಪೂರ ವೆಚ್ಚವನ್ನು ವಹಿಸಿಕೊಂಡು ಪುಸ್ತಕವನ್ನು ಪ್ರಕಾಶನಗೊಳಿಸಲು ಉದಾರವಾಗಿ ಧನಸಹಾಯ ಮಾಡಿರುತ್ತಾರೆ. ಸಂಸ್ಥೆಯ ಪರವಾಗಿ ಇವರಿಗೆ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಸಮರ್ಪಿಸಲಾಗಿದೆ.

ಎಂದಿನಂತೆ ಓದುಗರು ಈ ಪುಸ್ತಕವನ್ನು ಬರಮಾಡಿಕೊಂಡು ಪಠನಮಾಡಿ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಇತಿ

ಪ್ರಕಾಶಕರು.

ವೃಷ ನಾಮಸಂವತ್ಸರದ
ಆಷಾಢ ಬಹುಳ ಷಷ್ಠಿ, ಭಾನುವಾರ
ತಾ. ೧೩-೦೫-೨೦೦೧

# ವಿಷಯಾನುಕ್ರಮಣಿಕೆ


| | | |
|---|---|---|
| ೧. | ಆಗಮಸಂಪ್ರದಾಯ | ೧ |
| ೨. | ಶಿಷ್ಯಬುದ್ಧಿವಿಚಾಲನ | ೯ |
| ೩. | ಪ್ರತ್ಯಗಾತ್ಮಾವಬೋಧ | ೧೫ |
| ೪. | ಯಕ್ಷೋಪಾಖ್ಯಾನ | ೨೨ |
| ೫. | ಬ್ರಹ್ಮವಿದ್ಯಾಸಾಧನಗಳು | ೨೫ |
| ೬. | ಉಪಸಂಹಾರ | ೩೦ |
| ೭. | ಕೇನೋಪನಿಷತ್ತು (ಅರ್ಥಸಹಿತ) | ೩೧ |
| ೮. | ಉಪನಿಷತ್ತಿನ ಸಾರ | ೪೧ |


---o---

|| ಓಮ್ ||

# ಆತ್ಮಪ್ರತಿಬೋಧ

ಯಃ ಪ್ರತ್ಯಗಾತ್ಮಾ ಸರ್ವೇಷಾಂ ಸಚ್ಚಿದಾನನ್ದ ಅದ್ವಯಃ ।
ಬೋಧಸಾಕ್ಷೀ ಸ್ವಯಂಜ್ಯೋತಿಃ ತಂ ವರೇಣ್ಯಮುಪಾಸ್ಮಹೇ ॥

## ೧. ಆಗಮಸಂಪ್ರದಾಯ

**"ಓಂ ನಮೋ ಬ್ರಹ್ಮಾದಿಭ್ಯೋ ಬ್ರಹ್ಮವಿದ್ಯಾಸಂಪ್ರದಾಯ ಕರ್ತೃಭ್ಯೋ ವಂಶರ್ಷಿಭ್ಯೋ ನಮೋ ಮಹದ್ಭ್ಯೋ ನಮೋ ಗುರುಭ್ಯಃ"** ಎಂದು ಉಪಕ್ರಮಿಸುತ್ತಾ **ಆತ್ಮಪ್ರತಿಬೋಧ**ವೆಂಬ ಸಿದ್ಧಾಂತಪ್ರಧಾನವಾದ ಪುಸ್ತಿಕೆಯೊಂದನ್ನು ರಚಿಸಿ ಸದ್ಗುರುಪಾದಕಮಲಗಳಲ್ಲಿ ಸಮರ್ಪಿಸಲು ಆರಂಭಿಸುವೆನು.

೧. ನಮ್ಮ ಭರತಖಂಡದ ಸಂಸ್ಕೃತಿಯಲ್ಲಿ ವೇದಗಳಿಗೆ ಮುಖ್ಯವಾದ ಸ್ಥಾನವಿದೆ. ಈ ವೇದಗಳೇ ಇಡಿಯ ಮಾನವಜನಾಂಗದ ಸಂಸ್ಕೃತಿಯ ಮೂಲಗಳಾಗಿವೆ - ಎಂದರೆ ಅತಿಶಯೋಕ್ತಿಯಾಗಲಾರದು. ವೇದ ಎಂದರೆ ಏತರಿಂದ ನಾವು ತತ್ತ್ವವನ್ನು ಅರಿಯುತ್ತೇವೆಯೋ ಆ ಉಪದೇಶವು. ಇಂಥ ವೇದಮಂತ್ರಗಳನ್ನು ಪ್ರಾಚೀನಋಷಿಗಳು ತಪಃಸಮಾಧಿಯಲ್ಲಿದ್ದಾಗ ತಮ್ಮ ಶುದ್ಧಾಂತಃಕರಣದಲ್ಲಿ ಭಗವಂತನಿಂದ ಪ್ರೇರಣೆಯಾದಂತೆಲ್ಲ ಹಾಡುತ್ತಾ ಬಂದರು. ಆದ್ದರಿಂದಲೇ ಅವರುಗಳಿಗೆ **ಋಷಿ**ಗಳೆಂಬ ಹೆಸರು ಬಂದಿತು. ಇಂಥ ಋಷಿಗಳು ಹಾಡಿರುವ ವೇದರಾಶಿಯು ಅನಂತವಾಗಿದ್ದು ಈಗ ನಾಲ್ಕು ವೇದಗಳಾಗಿ ನಮಗೆ ಉಪಲಬ್ಧವಾಗಿವೆ. ಇವೂ ಸಹ ಅಧ್ಯಯನ ಪರಂಪರೆಯು ನಷ್ಟವಾದ್ದರಿಂದ ತಮ್ಮ ಅನೇಕ ಶಾಖೋಪಶಾಖೆಗಳನ್ನು ಕಳೆದುಕೊಂಡು ಅಲ್ಪಸ್ವಲ್ಪವಾಗಿ ಉಳಿದುಕೊಂಡಿವೆ. ಇಷ್ಟನ್ನಾದರೂ ಕಾಪಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಈ ವೇದಗಳ ಕೊನೆಯಭಾಗಗಳಿಗೆ **ವೇದಾಂತ**ಗಳೆಂದು ಹೆಸರು. ಇವುಗಳನ್ನು ಅರಣ್ಯದಲ್ಲಿ ಅಧ್ಯಯನಮಾಡ

ಬೇಕಾಗಿರುವದರಿಂದ **ಆರಣ್ಯಕ**ಗಳು ಎಂದೂ ಕರೆಯುತ್ತಾರೆ. ಈ ಅರಣ್ಯಕ ಗ್ರಂಥಗಳಲ್ಲಿ **ಉಪನಿಷತ್ತು**ಗಳು ಪ್ರಧಾನವಾದವುಗಳು. ಇವುಗಳು ಎಲ್ಲಾ ವೇದಗಳಲ್ಲಿಯೂ ಇವೆ. ಇವುಗಳಲ್ಲಿಯೂ ಹತ್ತು ಉಪನಿಷತ್ತುಗಳು ಇನ್ನೂ ಮುಖ್ಯವಾದವುಗಳು. ಇವುಗಳಿಗೆ ಶ್ರೀಶಂಕರಭಗವತ್ಪಾದರವರು ತಮ್ಮ ಅಮೋಘವಾದ **ಭಾಷ್ಯ**ವನ್ನು ರಚಿಸಿರುತ್ತಾರೆ. ಪ್ರಕೃತಗ್ರಂಥಕ್ಕೆ ನಾನು **ಕೇನೋಪನಿಷತ್ತನ್ನು** ಆಧಾರವಾಗಿಟ್ಟುಕೊಂಡಿರುತ್ತೇನೆ.

೨. ಕೇನೋಪನಿಷತ್ತು ಸಾಮವೇದದ ತಲವಕಾರಶಾಖೆಗೆ ಸೇರಿದೆ. ಆದ್ದರಿಂದ **ತಲವಕಾರೋಪನಿಷತ್ತು** ಎಂದೂ ಅದನ್ನು ಕರೆಯುವ ರೂಢಿ ಇದೆ. ಇದು ಪರಿಮಾಣದಲ್ಲಿ ಚಿಕ್ಕದಾದರೂ ಚೊಕ್ಕವಾಗಿ ಆತ್ಮತತ್ತ್ವವನ್ನು ವಿವರಿಸುತ್ತದೆ ; ಆಗಮಪ್ರಧಾನವಾದ ಉಪದೇಶಗಳನ್ನು ಒಳಗೊಂಡು ನೇರಾಗಿ ಅನುಭವಪರ್ಯಂತವಾಗಿ ಆತ್ಮತತ್ತ್ವವನ್ನು ಬೋಧಿಸಿ ಕೊನೆಯಲ್ಲಿ ಜ್ಞಾನಸಾಧನಗಳನ್ನೂ ಸೂಕ್ಷ್ಮವಾಗಿ ಪ್ರಸ್ತಾಪಿಸಿ ಉಪಸಂಹಾರವಾಗಿದೆ. ಹೀಗೆ ಜ್ಞಾನ, ಉಪಾಸನೆ, ಕರ್ಮ - ಎಲ್ಲವನ್ನೂ ಸಂಪ್ರದಾಯಬದ್ಧವಾಗಿ ವಿವರಿಸಿರುವದಲ್ಲದೆ ಕಥೆಯೊಂದರ ನೆಪದಿಂದ ಬ್ರಹ್ಮತತ್ತ್ವದ ಹಿರಿಮೆಯನ್ನೂ ಸರ್ವೋತ್ಕೃಷ್ಟತ್ವವನ್ನೂ ಹೊಗಳಿದೆ. ಇಂಥ ಸಕಲಸೌಕರ್ಯವಿಶಿಷ್ಟವಾದ, ಅಮೂಲ್ಯವಾದ, ಈ ಉಪನಿಷತ್ತು ಜಿಜ್ಞಾಸುಗಳಿಗೆ ಪ್ರಾರಂಭಕ್ಕೆ ತಕ್ಕದ್ದಾಗಿದೆ.

೩. ಉಪನಿಷತ್ತು ಎಂದರೆ ಬ್ರಹ್ಮವಿದ್ಯೆ. ಉಪ ಎಂದರೆ ಸಮೀಪಕ್ಕೆ ನಿ - ಎಂದರೆ ನಿಶ್ಚಯವಾಗಿ ಸದ್ - ಒಯ್ಯುವದು - ಎಂದರೆ ಅಧಿಕಾರಿಯನ್ನು ಬ್ರಹ್ಮದ ಸಮೀಪಕ್ಕೆ ಕರೆದೊಯ್ಯುವದು ಅಥವಾ ಹೆಚ್ಚಿನ ನಿಃಶ್ರೇಯಸವನ್ನುಂಟುಮಾಡತಕ್ಕದ್ದು ಎಂದೂ ಅರ್ಥಮಾಡಬಹುದು. ಹೀಗೆ ಉಪನಿಷತ್ತುಗಳೆಲ್ಲವೂ ಸಂಸಾರಬೀಜವಾದ ಅವಿದ್ಯೆಯನ್ನು ಕಳೆದು ಆತ್ಮೈಕತ್ವವಿದ್ಯೆಯನ್ನು ಉಂಟುಮಾಡುವದಕ್ಕಾಗಿಯೇ ಪ್ರಾರಂಭಿಸಲ್ಪಟ್ಟಿವೆ - ಎಂದು ಆಚಾರ್ಯರು ಅಭಿಪ್ರಾಯಪಟ್ಟಿರುತ್ತಾರೆ. ಮತ್ತು ಎಲ್ಲಾ ವೇದಾಂತ (ಉಪನಿಷತ್ತು)ಗಳಿಗೂ ನಿರ್ವಿಶೇಷಕೂಟಸ್ಥಾದ್ವಿತೀಯಪರಬ್ರಹ್ಮದಲ್ಲಿಯೇ

ಸಮನ್ವಯ - ಎಂದರೆ ಅದನ್ನು ಗೊತ್ತುಪಡಿಸುವದರಲ್ಲಿಯೇ ತಾತ್ಪರ್ಯವೆಂದೂ ಅವರು ತಿಳಿಸಿರುತ್ತಾರೆ.

೪. ಇಲ್ಲಿ ಒಂದು ಶಂಕೆ : ಮಾತು ಮನಸ್ಸುಗಳಿಗೆ ನಿಲುಕದ ಈ ನಿರ್ವಿಶೇಷತತ್ತ್ವವನ್ನು ಜನರಿಗೆ ತಿಳಿಸುವದಾದರೂ ಹೇಗೆ ? ಭಾಷೆಯನ್ನು ಉಪಯೋಗಿಸದೆ, ಉಪದೇಶವು ಸಾಧ್ಯವಾಗಲಾರದಲ್ಲವೆ ? ಉಪಯೋಗಿಸಿದರೆ ಅದು ಪರಬ್ರಹ್ಮವನ್ನು ಮುಟ್ಟಲಾರದೆ ಹಿಂತಿರುಗುವದಲ್ಲವೆ ? ಹಾಗಾದರೆ ಇದನ್ನು ತಿಳಿಯುವ ಬಗೆ ಹೇಗೆ ?- ಎಂದು ವಿಚಾರಪರರಿಗೆ ಅನ್ನಿಸದೆ ಇರದು. ಇದೇ ಶಂಕೆಯನ್ನು ಈ ಉಪನಿಷತ್ತು ಸಹ ಎಬ್ಬಿಸಿ **'ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್'** (ಇದನ್ನು ಹೇಗೆ ಶಿಷ್ಯರಿಗೆ ತಿಳಿಸಬೇಕೋ ನಾವು ಕಾಣೆವು, ನಾವು ಅರಿಯೆವು ) ಎಂದು ಹೇಳಿರುತ್ತದೆ. ಆದರೆ ಇದು ಲೌಕಿಕದೃಷ್ಟಿಯಿಂದ ಹೇಳಿದ್ದು. ಪ್ರತ್ಯಕ್ಷಾದಿ ಪ್ರಮಾಣಗಳಿಂದ ಈ ತತ್ತ್ವವನ್ನು ತಿಳಿಯಲಾಗುವದಿಲ್ಲ - ಎಂಬುದು ನಿಜವಾದರೂ **ಆಗಮ**ದಿಂದ ತಿಳಿಯಲು ಸಾಧ್ಯವಿದೆ - ಎಂದು ಆಚಾರ್ಯರು ಬರೆದಿದ್ದಾರೆ. ಈ ಆಗಮವು ಸಂಪ್ರದಾಯಪ್ರಾಪ್ತವಾಗಿಯೇ ಬರಬೇಕು. ಗುರುಶಿಷ್ಯಪರಂಪರೆಯಿಂದ ಬಂದಿರುವ ಉಪದೇಶವೆಂಬ ಸಂಪ್ರದಾಯವೇ ಇಲ್ಲಿ ವಿವಕ್ಷಿತವಾಗಿದೆ. ಇದರ ಬಗ್ಗೆ ಸ್ವಲ್ಪ ವಿಚಾರಮಾಡೋಣ.

೫. ಸಂಪ್ರದಾಯ - ಎಂದರೆ **'ಸಮ್ಯಕ್ - ಪ್ರದೀಯತೇ - ಅಸ್ಮೈ - ಇತಿ ಸಂಪ್ರದಾಯಃ'** ಎಂದು ಆಚಾರ್ಯರು ವಿವರಿಸಿದ್ದಾರೆ. ಅನುಭವಿಯಾದ ಗುರುವು ಅಧಿಕಾರಿಯಾದ ಶಿಷ್ಯನಿಗೆ ಕರುಣೆಯಿಂದ ಉಪದೇಶವನ್ನು ಅನುಗ್ರಹಿಸುವನು. ಇದೇ ಸಂಪ್ರದಾಯ. ಇದರ ಹೊರತು ಬ್ರಹ್ಮವಿದ್ಯೆಯನ್ನು ಪಡೆಯಲು ಬೇರೆ ಮಾರ್ಗವೇ ಇಲ್ಲ. ಇದನ್ನೇ ಕಠೋಪನಿಷತ್ತಿನಲ್ಲಿ ''ಆಗಮವಂತನಾದ ಆಚಾರ್ಯನು ಬ್ರಹ್ಮವೇ ತಾನಾಗಿದ್ದುಕೊಂಡಿರುವದರಿಂದ ಆತನು ಉಪದೇಶಿಸಿದರೆ ತತ್ತ್ವವು ತಿಳಿಯಲಿಲ್ಲ - ಎಂಬುದಿಲ್ಲವೇ ಇಲ್ಲ'' ಎಂದು ವರ್ಣಿಸಿದೆ. ಆದ್ದರಿಂದ ಸಂಪ್ರದಾಯವೆಂದರೆ ಗುರುಶಿಷ್ಯಸಂಪ್ರದಾಯವೆಂದರ್ಥ.

೬. ಇನ್ನು ಆಗಮವೆಂದರೆ ಆಚಾರ್ಯನು ಉಪದೇಶಿಸುವ ಕ್ರಮ (Method) ಎಂದರ್ಥ. ಇದರ ಗುಟ್ಟೇನೆಂದರೆ : ಬ್ರಹ್ಮವನ್ನು ತಿಳಿಸಲು ಆಚಾರ್ಯನು ಒಂದು ವಿಲಕ್ಷಣರೀತಿಯಿಂದ ಭಾಷೆಯನ್ನು ಉಪಯೋಗಿಸುತ್ತಾನೆ. ಆಗ ಭಾಷಾಪ್ರಪಂಚದ ಯಾವ ದೋಷಗಳೂ ಆ ಬ್ರಹ್ಮಕ್ಕೆ ಮುಟ್ಟದಂತೆ ಶಿಷ್ಯನಿಗೆ ನೇರಾಗಿ ತತ್ತ್ವವು ತಿಳಿದುಬಿಡುವದು. ಅಲ್ಲಿ ಆಚಾರ್ಯ, ಶಿಷ್ಯ, ಉಪದೇಶ - ಎಲ್ಲವೂ ಬ್ರಹ್ಮವೇ ಆಗಿಬಿಟ್ಟಿರುವದು. ಇದೇ ಆಗಮವೆಂಬುದು. ಇದರ ವಿವರವನ್ನು ಕೇನೋಪನಿಷತ್ತಿನಲ್ಲಿ ಬಹುಚೆನ್ನಾಗಿ ಪ್ರತಿಪಾದಿಸಿದೆ.

೭. ಒಬ್ಬಶಿಷ್ಯನು ಬ್ರಹ್ಮನಿಷ್ಠನಾದ ಗುರುವನ್ನು ಬಳಿಸಾರಿ ಅಭಯವೂ ಶಿವವೂ ಅಚಲವೂ ಆದ ಪದವಿಯನ್ನು ಬಯಸಿ ಕೇಳಿದನು. 'ಪೂಜ್ಯರೆ, ನಮ್ಮ ಒಳಗಿರುವ ಮನಸ್ಸು, ಪ್ರಾಣ, ವಾಕ್ಕು - ಮುಂತಾದ ಕರಣಗಳನ್ನು ಪ್ರೇರಿಸುವ ದೇವನು ಯಾವನಿರಬಹುದು ? ಏಕೆಂದರೆ ಕರಣಗಳು, ಅಚೇತನಗಳು. ಅವು ತಾವಾಗಿಯೇ ಪ್ರತಿವರ್ತಿಸಲಾರವು. ಆದ್ದರಿಂದ 'ಯಾರ ಪ್ರೇರಣೆಯಿಂದಲೋ ಇವು ವ್ಯಾಪಾರಮಾಡುತ್ತಿರಬೇಕಲ್ಲವೆ ?' ಎಂದು ಪ್ರಶ್ನೆಮಾಡಿದ್ದಾನೆ. ಅದಕ್ಕೆ ಗುರುವು ಒಂದು ಸಾಮಾನ್ಯವಾದ ಉತ್ತರವನ್ನು ಕೊಟ್ಟಿರುತ್ತಾನೆ. ಏನೆಂದರೆ : "ಅಪ್ಪ ಕೇಳು. ನಿನ್ನ ಕಣ್ಣು, ಕಿವಿ, ಮನಸ್ಸು, ಪ್ರಾಣಗಳಿಗೆ ಕಣ್ಣು, ಕಿವಿ, ಮನಸ್ಸು ಪ್ರಾಣಗಳಾಗಿದ್ದುಕೊಂಡಿರುವ ಒಂದು ವಸ್ತುವಿದೆ - ಕಣ್ಣು ತಾನು ಕಣ್ಣು - ಎನಿಸಿಕೊಂಡು ಪದಾರ್ಥಗಳನ್ನು ನೋಡಬೇಕಾದರೆ ಕಣ್ಣಿಗೆ ಕಣ್ಣಾದ ಆತನ ಬೆಳಕು ಬೇಕು. ಅವನೇ ಸರ್ವಕರಣಗಳಿಗೂ ಒಳಗಿರುವ ಜ್ಯೋತಿಯು. ಇಂಥ ಚೈತನ್ಯದ ಬೆಳಕಿನಿಂದಲೇ ಎಲ್ಲಾ ಪ್ರಾಣಿಗಳೂ ಜೀವಿಸಿದ್ದು ತಮ್ಮ ವ್ಯಾಪಾರವನ್ನು ಮಾಡುತ್ತಿವೆ. ಇದನ್ನು ಅಹಂಕಾರಮಮಕಾರಗಳನ್ನು ಬಿಟ್ಟಿದ್ದ ಧೀರರು ಅರಿತು ಅಮೃತರಾಗುವರು" ಎಂದು ತಿಳಿಸಿದನು.

೮. ಈ ಉಪದೇಶದ ಅರ್ಥವು ಶಿಷ್ಯನಿಗೆ ಚೆನ್ನಾಗಿ ತಿಳಿದಿರಲಾರದೆಂದು ಭಾವಿಸಿ ಮತ್ತೆ ಆಗಮದಿಂದ ಆಚಾರ್ಯನು ಹೀಗೆ ಉಪದೇಶಿಸಿದನು :

ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ ।
ಇತಿ ಶುಶ್ರುಮ ಪೂರ್ವೇಷಾಂ ಯೇನಸ್ತದ್ವ್ಯಾಚಚಕ್ಷಿರೇ ॥

"ಬ್ರಹ್ಮವು ವಿದಿತಕ್ಕಿಂತಲೂ ಅವಿದಿತಕ್ಕಿಂತಲೂ ಬೇರೆಯಾಗಿದೆ. ಹೀಗೆಂದು ಪೂರ್ವಿಕರು ಹೇಳಿರುವದನ್ನು ನಾವು ಕೇಳಿದ್ದೇವೆ" ಎಂದು ಈ ವಾಕ್ಯದ ಅರ್ಥ. ಇದರ ವಿವರವನ್ನು ಸ್ವಲ್ಪ ವಿಚಾರಮಾಡೋಣ. ಆಗಮದಿಂದ ಆಚಾರ್ಯನು ಇಲ್ಲಿ ಉಪದೇಶಮಾಡುತ್ತಿದ್ದಾನೆಂಬುದನ್ನು ಮರೆಯಬಾರದು.

ಬ್ರಹ್ಮವು ವಿದಿತಕ್ಕಿಂತ ಬೇರೆಯೇ -ಎಂದರೆ ವ್ಯಾಕೃತಕ್ಕಿಂತ ಬೇರೆ ಎಂದಭಿಪ್ರಾಯ. ವ್ಯಾಕೃತವೆಂದರೆ ಬಿಡಿಬಿಡಿಯಾಗಿದ್ದು ನಾಮರೂಪಗಳಿಂದ ಕೂಡಿ ಇಂದ್ರಿಯಗಳಿಗೆ ಗೋಚರವಾಗಿ ತೋರುತ್ತಿರುವ ಪ್ರಪಂಚವು. ಯಾವದೇ ವಸ್ತು ಇದೆ - ಎಂದರೆ ಇಂದ್ರಿಯಗಳಿಗೆ ಗೋಚರವಾಗಿದೆ - ಎಂದೇ ಅರ್ಥ. ಇಲ್ಲದಿದ್ದರೆ ಅದು ಇದೆ ಎಂಬ ಮಾತಿಗೆ ಅರ್ಥವೇ ಇಲ್ಲ. ಆದ್ದರಿಂದ ವ್ಯಾಕೃತಪ್ರಪಂಚವೆಲ್ಲವೂ 'ವಿದಿತ'ವಾಯಿತು. ಬ್ರಹ್ಮವು ಇಂಥ **ವಿದಿತವಲ್ಲ** - ಎಂದರೆ ಇಂದ್ರಿಯಗೋಚರವಸ್ತುವಲ್ಲ - ಎಂದರ್ಥ. ಹಾಗಾದರೆ ವಿದಿತವಲ್ಲದಿದ್ದರೆ ಬ್ರಹ್ಮವು ಅವಿದಿತವಾಗಿರಬಹುದಲ್ಲ !... ಎಂದರೆ ಇಂದ್ರಿಯಗೋಚರವಾದ ವಸ್ತುಗಳಿಗೆ ಕಾರಣವಾಗಿದ್ದು ಇಂದ್ರಿಯ ಗಳಿಂದಲೂ ಗ್ರಹಿಸಲಾಗದ ಎಲ್ಲಕ್ಕೂ ಬೀಜವಾದ **ಅವಿದಿತ** ವಸ್ತುವಾಗಿರಬಹುದಲ್ಲ! -ಎಂದು ಯಾರಾದರೂ ಕಲ್ಪಿಸಬಹುದು. ಆದರೆ ಬ್ರಹ್ಮವು ಅಂಥ ಕಲ್ಪಿತಕಾರಣವಸ್ತುವೂ ಅಲ್ಲ. ಏಕೆಂದರೆ ಬ್ರಹ್ಮವು ಅಧಿ, ಮೇಲಿದೆ - ಎಂದರೆ ಕಾರ್ಯಕಾರಣಭಾವವನ್ನೂ ಬೀಜಫಲಭಾವವನ್ನೂ ಮೀರಿದ್ದಾಗಿದೆ. ಆದ್ದರಿಂದ ಜಗತ್ತು ಅದರ ಬೀಜ - ಎಂಬ ವಿಕಲ್ಪಗಳು ವ್ಯವಹಾರದಲ್ಲೇ ಅಡಕವಾಗಿರುವದರಿಂದ ಸರ್ವವ್ಯವಹಾರಾತೀತವಾದ ಬ್ರಹ್ಮವು ಈ ವ್ಯಾಕೃತಾವ್ಯಾಕೃತಗಳೆರಡೂ ಆಗಿರಲಾರದು. ಇದನ್ನೇ 'ವಿದಿತಾವಿದಿತಾಭ್ಯಾಮನ್ಯತ್' ಎಂದು ಉಪನಿಷತ್ತು ವರ್ಣಿಸುತ್ತಿದೆ. ಹೀಗಾದರೆ ಬ್ರಹ್ಮವು ಯಾವ ರೀತಿಯಿಂದಲೂ ತಿಳಿಯಲು ಬಾರದ್ದು

ಎಂದಾಯಿತಲ್ಲ ! - ಎಂದರೆ ಒಳ್ಳೆಯದೇ ಆಯಿತು. ಬ್ರಹ್ಮವನ್ನು ತಿಳಿಯಬೇಕು ಎಂಬ ಜಿಜ್ಞಾಸೆಯು ಶಿಷ್ಯನಿಗೆ ಹೋಗಿಬಿಟ್ಟರೆ ಜಿಜ್ಞಾಸುವಿನ ಆತ್ಮಸ್ವರೂಪವೇ ಆಗಿರುವ ಬ್ರಹ್ಮವು ತಾನೇತಾನಾಗಿ ಸಿದ್ಧವಾಗುವದು. ಜಿಜ್ಞಾಸಾಪರಿಸಮಾಪ್ತಿಯಾದಾಗಲೇ ಆತ್ಮಾನುಭವವು ಪೂರ್ಣವಾಗುವದು.

ಈ ವಾಕ್ಯವನ್ನು ಮತ್ತೊಂದು ರೀತಿಯಿಂದಲೂ ವಿವರಿಸಬಹುದು. ಹೇಗೆಂದರೆ : ಬ್ರಹ್ಮವು ಬಾಹ್ಯವಸ್ತುಗಳಂತೆ ಇಂದ್ರಿಯಗಳಿಂದ ಪ್ರಮಾಣಗಳನ್ನುಪಯೋಗಿಸಿ ಜ್ಞೇಯವಾಗಿ ಮಾಡಿಕೊಂಡು ತಿಳಿಯಲು ಬರುವದಿಲ್ಲವಾದ್ದರಿಂದ **ವಿದಿತ**ಕ್ಕಿಂತ ಬೇರೆಯೆಂದಾಯಿತು. ಹೇಗೆಂದರೆ ಒಬ್ಬ ಮನುಷ್ಯನು 'ಇಲ್ಲಿ ಒಂದು ಮಾವಿನಹಣ್ಣು ನನಗೆ ಕಾಣಿಸುತ್ತಿದೆ' ಎಂದು ಹೇಳಿದರೆ 'ನಾನು'- ಎಂಬ ಆತನು ಪ್ರಮಾತೃ (ತಿಳಿಯುವವನು) ವಾದನು. 'ಹಣ್ಣು 'ಎಂಬದು ಪ್ರಮೇಯ (ತಿಳಿಯಲ್ಪಡತಕ್ಕದ್ದು)ವಾಯಿತು. 'ಕಾಣಿಸುತ್ತಿದೆ'- ಎಂದಾಗ ಅವನು ಕಣ್ಣುಗಳನ್ನುಪಯೋಗಿಸಿ ತಿಳಿದದ್ದರಿಂದ ಕಣ್ಣು ಪ್ರಮಾಣ (ಪ್ರಮಾಕರಣ - ತಿಳಿವಳಿಕೆಗೆ ಸಾಧನ)ವಾಯಿತು. ಇಲ್ಲಿ ಹಣ್ಣು 'ವಿದಿತ'ವಾಯಿತು ; ಹೀಗೆ ಯಾವನಾದರೂ 'ಬ್ರಹ್ಮವನ್ನು ನಾನು ತಿಳಿಯುತ್ತೇನೆ ' ಎಂದು ಬ್ರಹ್ಮವನ್ನು ವಿಷಯ (ಪ್ರಮೇಯ) ವಾಗಿಸಿಕೊಂಡು ಮನ ಇಂದ್ರಿಯಗಳ ನೆರವಿನಿಂದ ತಿಳಿಯಲು ಹೋದರೆ ಅದು ಗೊತ್ತಾಗಲಾರದು. ಆದ್ದರಿಂದ ಬ್ರಹ್ಮವು 'ವಿದಿತ'ಕ್ಕಿಂತ ಬೇರೆಯೇ - ಎಂದಾಯಿತು. ಹೀಗೆಯೇ ಬ್ರಹ್ಮವು 'ಅವಿದಿತ'ಕ್ಕಿಂತಲೂ ಬೇರೆಯಾಗಿದೆ. ಹೇಗೆಂದರೆ : ಯಾವನಾದರೊಬ್ಬನು ಒಬ್ಬ ಗೊಲ್ಲನನ್ನು 'ನಿನಗೆ ತರ್ಕಶಾಸ್ತ್ರವು ತಿಳಿದಿದೆಯೊ ?' ಎಂದು ಕೇಳಿದಾಗ ಅವನು ಅದನ್ನು ಅಧ್ಯಯನಮಾಡದೆ ಇರುವನಾದ್ದರಿಂದ 'ನನಗೆ ತಿಳಿಯದು' ಎನ್ನುತ್ತಾನೆ. ಇಲ್ಲಿ ಅವನು 'ತರ್ಕಶಾಸ್ತ್ರವೆಂಬುದೊಂದಿದೆ' ಅದನ್ನು ತಿಳಿಯಲು ಸಾಧ್ಯವಿದೆ. ಆದರೆ ನಾನು ಕಲಿತಿಲ್ಲವಾದ್ದರಿಂದ ಗೊತ್ತಿಲ್ಲ ' - ಎಂದು ಭಾವಿಸಿರುತ್ತಾನೆ. ಹಾಗೆ 'ಬ್ರಹ್ಮವೆಂಬುದೊಂದಿದೆ ; ಅದನ್ನು ತಿಳಿಯಲು ಸಾಧ್ಯವಿದೆ. ಈಗ ನನಗೆ ಗೊತ್ತಿಲ್ಲ' - ಎಂದು ಯಾವನಾದರೂ ಭಾವಿಸಿದರೆ ಅದು ಬ್ರಹ್ಮವಲ್ಲ.

ಉದಾರಹಣೆಯಲ್ಲಿ ತರ್ಕಶಾಸ್ತ್ರವು ಅವಿದಿತ ; ಹಾಗೆ ಬ್ರಹ್ಮವು ಎಂದಿಗೂ ಅವಿದಿತವೂ ಅಲ್ಲ. ಅದಕ್ಕಿಂತಲೂ ಬೇರೆಯಾಗಿದೆ.

೯. ಹಾಗಾದರೆ ಬ್ರಹ್ಮವು ತಿಳಿಯಲ್ಪಡತಕ್ಕದ್ದೂ ಅಲ್ಲ, ತಿಳಿಯಲ್ಪಡದೆ ಇರತಕ್ಕದ್ದೂ ಅಲ್ಲ - ಎಂದರೇನರ್ಥ ? ಈ ವಾಕ್ಯವು ವ್ಯಾಹತ (ಹೊಂದದೆ ಇರುವ ) ವಚನವಾಗಿ ಕಾಣುತ್ತಿದೆಯಲ್ಲ! ಎಂದರೆ ಹಾಗಿಲ್ಲ. ಬ್ರಹ್ಮವು ವಿದಿತಾವಿದಿತಗಳೆರಡಕ್ಕಿಂತಲೂ 'ಅಧಿ' ಮೇಲೆ ಇದೆ. ಇದರ ಅಭಿಪ್ರಾಯವೇನೆಂದರೆ : ನಾವು ಯಾವದೇ ಒಂದು ವಸ್ತುವಿನ ಬಗ್ಗೆ ವಿಚಾರಿಸುವಾಗ ಇದು ತಿಳಿಯಿತು - ಅಥವಾ ತಿಳಿಯಲಿಲ್ಲ ಎನ್ನುತ್ತೇವಷ್ಟೆ! ಆದರೆ ಈ 'ತಿಳಿಯಿತು - ತಿಳಿಯಲಿಲ್ಲ' ಎಂಬುದಾದರೂ ನಮಗೆ ಹೇಗೆ ತಿಳಿಯಿತು ? ಎಂದು ಯೋಚಿಸಿದಾಗ ಯಾವದೋ ಒಂದು ಚೈತನ್ಯ ವಸ್ತುವು ನಮ್ಮ ತಿಳಿವು ಮರೆವುಗಳನ್ನು ಬೆಳಗುತ್ತಿದೆ - ಎಂದಾಯಿತು. ಅದೇ **ಸಾಕ್ಷಿ** ಎಂದು ವೇದಾಂತಗಳಲ್ಲಿ ಕರೆಯಲ್ಪಡುವದು. ಅದು ಯಾವ ವಿಕಾರವನ್ನೂ ತನ್ನಲ್ಲಿ ಹೊಂದದೆ ತಾನು ಇದ್ದಂತೆಯೇ ಇದ್ದುಕೊಂಡು ನಮ್ಮ ಎಲ್ಲಾ ಬುದ್ಧಿವೃತ್ತಿಗಳನ್ನೂ ಬೆಳಗುತ್ತಿದೆ, ಸ್ವಯಂಜ್ಯೋತಿಯಾಗಿದೆ. ಇದನ್ನೇ ಆಚಾರ್ಯರು ಮನಸ್ಸಿನಲ್ಲಿಟ್ಟುಕೊಂಡು ಶಿಷ್ಯನಿಗೆ ತಿಳಿಸಲು **'ವಿದಿತಾವಿದಿತಾಭ್ಯಾಮನ್ಯತ್'** ಎಂಬ ಆಗಮವನ್ನು ಉಪಯೋಗಿಸಿದ್ದಾರೆ. ಹೀಗಿದ್ದರೂ 'ಬ್ರಹ್ಮವು ನನಗೇನೋ ತಿಳಿಯಲಿಲ್ಲ' ಎನ್ನಬಾರದು. ಏಕೆಂದರೆ **ನಿಮಗೆ ಯಾವದು ತಿಳಿಯಲಿಲ್ಲವೋ ಅದು ಬ್ರಹ್ಮವಲ್ಲ, ಮತ್ತೇನೆಂದರೆ ತಿಳಿಯಲಿಲ್ಲ ಎಂಬುದನ್ನು ಏತರಿಂದ ತಿಳಿದುಕೊಂಡಿರೋ ಆ ಜ್ಞಪ್ತಿಸ್ವರೂಪವೇ ಬ್ರಹ್ಮ.** ಇದನ್ನು ಸಾವಕಾಶವಾಗಿ ಒಳಹೊಕ್ಕು ವಿಚಾರಮಾಡಬೇಕು. ಇದನ್ನು ಸಿದ್ಧಪಡಿಸಲು ಯಾವ ಪ್ರಮಾಣಗಳ ಅಪೇಕ್ಷೆಯಾಗಲಿ ಕರಣಗಳ ಅಪೇಕ್ಷೆಯಾಗಲಿ ಇರುವದಿಲ್ಲ. ಇದು **ಸ್ವಯಂಸಿದ್ಧವಸ್ತು.** ಇದರ ಬೆಳಕಿನಿಂದಲೇ ಉಳಿದ ಎಲ್ಲಾ ಅಂತರ್ಬಹಿಃಕರಣಗಳೂ ವ್ಯಾಪಾರ ಮಾಡುತ್ತಿವೆ. ಆದ್ದರಿಂದ ಒಳನೋಟದಿಂದ ಇದನ್ನು ಗುರುತಿಸಿ ತಿಳಿಯಬೇಕು. ಇದೇ ಆಚಾರ್ಯನು ಉಪದೇಶಿಸಿದ ಆಗಮವು.

೧೦. ಈಗ ಆಚಾರ್ಯರು ಈ ಉಪದೇಶವನ್ನು ಮತ್ತಷ್ಟು ಸ್ಫುಟಗೊಳಿಸಿ ಹೇಳುತ್ತಿದ್ದಾರೆ. ಯಾವದು ಮಾತಿನಿಂದ ಹೇಳಲ್ಪಡುವದಿಲ್ಲವೋ ಹಾಗೆಯೇ ಮನಸ್ಸಿನಿಂದ ಅರಿಯಲ್ಪಡುವದಿಲ್ಲವೋ, ಕಣ್ಣಿನಿಂದ ನೋಡಲ್ಪಡುವದಿಲ್ಲವೋ, ಕಿವಿಯಿಂದ ಕೇಳಲ್ಪಡುವದಿಲ್ಲವೋ, ಪ್ರಾಣದಿಂದ ಉಸಿರಾಡುವದಿಲ್ಲವೋ - ಮತ್ತೇನೆಂದರೆ ಮಾತೆಂಬುದೇ ಯಾವದರ ಶಕ್ತಿಯಿಂದ ತನ್ನ ವ್ಯಾಪಾರಮಾಡುತ್ತಿದೆಯೋ ಹಾಗೆಯೇ ಮನಸ್ಸು ಪದಾರ್ಥಗಳನ್ನು ಅರಿಯುತ್ತಿದೆಯೋ, ಕಣ್ಣು ರೂಪಗಳನ್ನು ನೋಡುತ್ತಿದೆಯೋ, ಕಿವಿಯು ಶಬ್ದಗಳನ್ನು ಕೇಳುತ್ತಿದೆಯೋ, ಪ್ರಾಣವು ಉಸಿರನ್ನು ಒಯ್ಯುತ್ತಿದೆಯೋ ಅದೇ ಬ್ರಹ್ಮವೆಂದು ತಿಳಿ - ಎಂಬುದು ಉಪದೇಶದ ಸಾರಾಂಶವು.

೧೧. ಇಲ್ಲಿ ಒಂದು ಪ್ರಶ್ನೆ : ಬ್ರಹ್ಮವನ್ನು ಇಂಥದ್ದೆಂದು ನೇರಾಗಿ ಹೇಳದೆ ವಾಕ್ಕು, ಪ್ರಾಣ - ಮುಂತಾದವುಗಳ ಲಿಂಗದಿಂದ (ಗುರುತಿನಿಂದ) ಅವಕ್ಕೂ ಒಳಗಿರುವ ಸಾಕ್ಷಿಯೆಂದು ಅರಿಯಬೇಕು ಎಂದು ಪರಂಪರೆಯಿಂದ ಏಕೆ ಹೇಳಬೇಕು ? ಇದರಲ್ಲೇನು ವಿಶೇಷ ? ಎಂದು ಯಾರಾದರೂ ಕೇಳಬಹುದು. ಆದರೆ ಇದಕ್ಕೆ ಉತ್ತರವನ್ನು ಹೇಳಿಯೇ ಆಗಿದೆಯಾದರೂ ಮತ್ತೆ ಶ್ರುತಿಯು ತಿಳಿಯಪಡಿಸುತ್ತದೆ. **'ನೇದಂ ಯದಿದಮುಪಾಸತೇ'** ಎಂಬುದೇ ಆ ಉತ್ತರ. ಅಂದರೆ ಬ್ರಹ್ಮವನ್ನು 'ಇದಮ್' ಎಂದು ವಿಷಯವಾಗಿಸಿಕೊಂಡು ತಿಳಿಯಲು ಬರುವದಿಲ್ಲ. ಹಾಗೆ ತಿಳಿದರೆ ಅದು ಅನಾತ್ಮವೇ ಆದೀತು. ಹಾಗಾದರೆ ಉಪಾಸನೆಯಲ್ಲಿ ಇದು ಬ್ರಹ್ಮವು ಎಂದು ವಿಷಯವಾಗಿಸಿಕೊಂಡೇ ಚಿಂತಿಸುತ್ತೇವಲ್ಲವೆ ? ಎಂದರೆ ಅದು ಬ್ರಹ್ಮವಲ್ಲವೆಂಬುದೇ ನಿಶ್ಚಯ. ಆದರೂ ಮನಸ್ಸಿನ ಏಕಾಗ್ರತೆಗಾಗಿ ಇದಂ ಇದು - ಎಂದು ಕಲ್ಪಿಸಿ ಶಾಸ್ತ್ರವು ಉಪಾಸ್ಯೋಪಾಸಕಭೇದವನ್ನಂಗೀಕರಿಸಿ ಹೇಳಿದೆ. ಅದು ಪರಮಾರ್ಥವಲ್ಲ. ಆದ್ದರಿಂದಲೇ ಇದಂ ಎಂಬುದನ್ನು ಕೈಬಿಟ್ಟು ಅದಕ್ಕೂ ಪ್ರತ್ಯಗಾತ್ಮನೆಂದು ತಿಳಿಯಬೇಕು. ಹೀಗೆ ನೇರಾಗಿ ಶಬ್ದಗಳಿಂದ ಬ್ರಹ್ಮವನ್ನು ಹೇಳಲಾಗುವದಿಲ್ಲವಾದ್ದರಿಂದ ಅನಾತ್ಮೋಪಾಧಿಗಳ

ಮೂಲಕ ಗುರುತಿಸಿ ಉಪಹಿತವಾದ (ಒಳಗೆ ಇದ್ದುಕೊಂಡಿರುವ) ಆ ತತ್ತ್ವವನ್ನು ಉಪಾಧಿಗಳಿಂದ ಕಳಚಿ ತಾನಾಗಿಯೇ ತಿಳಿಯಬೇಕು ; ಬ್ರಹ್ಮವು ಬ್ರಹ್ಮವೇ ಆಗಿದೆ - ಮತ್ತೇನೂ ಅಲ್ಲ, ಅದು ಜ್ಞಾತೃವೂ ಅಲ್ಲ, ಜ್ಞೇಯವೂ ಅಲ್ಲ ; ಸಾಕ್ಷಾದಪರೋಕ್ಷವಾಗಿರುವ ಸ್ವತಃಸಿದ್ಧವಾದ ಪರಮಾರ್ಥವು - ಎಂದು ಶ್ರುತಿಯು ತಿಳಿಸುತ್ತಿದೆ. ಹೀಗೆ ಹೇಳಿದ್ದರಿಂದ ಮಾತುಗಳಿಂದ ಹೇಳಿದರೂ ಹೇಳಿದಂತಾಗದೆ ನೇರಾಗಿ ಜಿಜ್ಞಾಸುವು ಬ್ರಹ್ಮವನ್ನೇ ಅರಿಯಲು ಸಾಧ್ಯವಾಯಿತು. ಶಿಷ್ಯಾಚಾರ್ಯಪ್ರಶ್ನಪ್ರತಿವಚನರೂಪದಿಂದ ಶ್ರುತಿಯು ಈಗ ಆಗಮವನ್ನುಪಯೋಗಿಸಿ ತತ್ತ್ವವನ್ನು ತಿಳಿಸಿದಂತಾಯಿತು ; ಸಂಪ್ರದಾಯವನ್ನೂ ಸ್ಫುಟಗೊಳಿಸಿದಂತಾಯಿತು.

--------

# ೨. ಶಿಷ್ಯಬುದ್ಧಿ ವಿಚಾಲನ

೧೨. ಈಗ ಶ್ರುತಿಯು ಆಚಾರ್ಯಶಿಷ್ಯರ ಸಂವಾದವನ್ನು ಮುಂದುವರೆಸಿ ಆತ್ಮೋಪದೇಶವನ್ನು ದೃಢಗೊಳಿಸಲು ಹೊರಟಿದೆ. ಒಂದು ಕಂಬವನ್ನು ನೆಡುವಾಗ ಅದು ಭದ್ರವಾಗಿರಲೆಂದು ನೆಟ್ಟಮೇಲೂ ಚೆನ್ನಾಗಿ ಅಳ್ಳಾಡಿಸುತ್ತಾರೆ. ಈ ಅಳ್ಳಾಡಿಸುವಿಕೆಯು ಕಂಬವನ್ನು ಮತ್ತಷ್ಟು ಭದ್ರಗೊಳಿಸುವದಕ್ಕಾಗಿಯೇ ಅಲ್ಲವೆ ? ಹಾಗೆಯೇ ಶಿಷ್ಯನು ಆಗಮದಿಂದ ಕೇಳಿದ ತತ್ತ್ವವನ್ನು ಸರಿಯಾಗಿ ತಿಳಿದುಕೊಂಡನೊ, ಇಲ್ಲವೊ - ಎಂಬುದನ್ನು ಪರೀಕ್ಷಿಸಲು ಆಚಾರ್ಯನು ಶಿಷ್ಯನಿಗೆ ಪ್ರಶ್ನೆ ಹಾಕುತ್ತಿದ್ದಾನೆ. ಮತ್ತು 'ನನಗೆ ಬ್ರಹ್ಮವು ತಿಳಿಯಿತು' ಎಂದು ಶಿಷ್ಯನು ಎಲ್ಲಿಯಾದರೂ ತಪ್ಪಾಗಿ ತಿಳಿದುಕೊಂಡಾನು ಎಂಬುದೂ ಆಚಾರ್ಯನ ಪ್ರಶ್ನೆಯ ಉದ್ದೇಶ. ಆದ್ದರಿಂದ ಹೀಗೆ ಕೇಳುತ್ತಿದ್ದಾನೆ. ' ಅಪ್ಪ, ನೀನು 'ಬ್ರಹ್ಮವನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ.' - ಎಂದು ಭಾವಿಸುವೆಯಾದರೆ ನೀನು ತಿಳಿದದ್ದು ಬ್ರಹ್ಮವಲ್ಲ, ಅದು ಅಲ್ಪವೇ'. ಬ್ರಹ್ಮದ ಯಾವ ರೂಪವನ್ನು ತಿಳಿದರೂ ಅಲ್ಪವೇ ಎಂದರ್ಥ. ಹಾಗೇಕೆ ? ಬ್ರಹ್ಮಕ್ಕೆ ಬೇಕಾದಷ್ಟು ದೊಡ್ಡದೊಡ್ಡ

ರೂಪಗಳಿವೆಯಲ್ಲ ! ಅವು ಅಲ್ಪವೇಕಾದೀತು ? ಸಮುದ್ರ, ಆಕಾಶ - ಮುಂತಾವುಗಳು ಅಲ್ಪವೆ ? ಎಂದರೆ ಹಾಗಲ್ಲ. ಬ್ರಹ್ಮವು ರೂಪವುಳ್ಳದ್ದೆಂದು ತಿಳಿದಕೂಡಲೆ ಅದು ಖಂಡಿತ ಅಲ್ಪವೇ ಆಯಿತು. ಏಕೆಂದರೆ ಬ್ರಹ್ಮಕ್ಕೆ ರೂಪವೇ ಇಲ್ಲ. ಶಬ್ದಸ್ಪರ್ಶಾದಿಗಳೂ ಇಲ್ಲ. ಹೀಗಿರುವಾಗ ರೂಪಾದ್ಯುಪಾಧಿಗಳಿಗೆ ಒಳಪಡಿಸಿ ಬ್ರಹ್ಮವನ್ನು ಅರಿತುಕೊಂಡರೆ ಅಲ್ಪವಲ್ಲದೆ ಮತ್ತೇನು ? ಎಂದು ಆಚಾರ್ಯನ ಅಭಿಪ್ರಾಯ.

ಹಾಗಾದರೆ ದೇವತೆಗಳ ರೂಪದಿಂದ ಅರಿಯಬಹುದಲ್ಲ ! ದೇವತೆಗಳೆಂದರೆ ಮನುಷ್ಯರಿಗಿಂತ ಮಿಗಿಲಾದವರು. ಈ ಪ್ರಪಂಚವನ್ನೆಲ್ಲ ಆಳುವವರು, ನಿಗ್ರಹಾನುಗ್ರಹಸಂಪನ್ನರು, ಅಂತರ್ಧಾನಾದಿಶಕ್ತಿಯುಳ್ಳವರು ಇತ್ಯಾದಿ. ಆದ್ದರಿಂದ ಅಗ್ನಿ, ವಾಯು, ಇಂದ್ರ, ಬ್ರಹ್ಮನೇ ಮೊದಲಾದ ದೇವತೆಗಳ ರೂಪದಿಂದ ಅಥವಾ ಈ ದೇವತೆಗಳಿಗೂ ದೇವತೆಯಾದ ಮಹಾದೇವತೆಯೇ ಬ್ರಹ್ಮವು ಎಂದಾಗಲಿ ಅರಿಯಬಹುದಲ್ಲವೆ ? ಆಗ ಅಲ್ಪವೇಕಾದೀತು ? ಎಂದರೆ ಅದೂ ಸರಿಯಲ್ಲ. ದೇವತೆಗಳಿಗಿಂತಲೂ ಬ್ರಹ್ಮವು ದೊಡ್ಡದು - ಎಂದು ತಿಳಿದರೂ ಬ್ರಹ್ಮವನ್ನು ಪೂರ್ತಿಯಾಗಿ ತಿಳಿದಂತಾಗಲಿಲ್ಲ. ಇನ್ನೂ ಬ್ರಹ್ಮವನ್ನು ವಿಚಾರಮಾಡತಕ್ಕದ್ದಿದೆ - ಎಂದೇ ನಾನು ಭಾವಿಸುತ್ತೇನೆ - ಎಂದು ಆಚಾರ್ಯನು ಶಿಷ್ಯನ ಬುದ್ಧಿಯನ್ನು ಅಳ್ಳಾಡಿಸಿದನು.

೧೩. ಇಲ್ಲಿ ತಿಳಿಯಬೇಕಾದ ಅಂಶವೇನೆಂದರೆ : ಮನುಷ್ಯನು 'ನಾನು ಬುದ್ಧಿವಂತ - ಎಂಥ ಗಹನವಿಷಯವನ್ನಾದರೂ ಅರಿತುಕೊಂಡುಬಿಡುವೆನು ಎಂಬ ಅಹಂಕಾರದಿಂದಲೇ ಎಲ್ಲಾ ವಿದ್ಯೆಗಳನ್ನೂ ಕಲಿಯಲು ಪ್ರವರ್ತಿಸುವದು ಸ್ವಾಭಾವಿಕ. ಅದರಲ್ಲಿಯೂ ಈಗಿನ ವಿಚಾರಪ್ರಧಾನವಾದ ವಿಜ್ಞಾನಯುಗದಲ್ಲಿ ಬುದ್ಧಿಯ ಉಪಯೋಗವೇ ಹೆಚ್ಚಾಗಿದ್ದು ಅದಕ್ಕೇ ಜಯ ; ಅದು ಹೇಳಿದ್ದೇ ಪರಮಾರ್ಥ - ಎಂದಾಗಿಬಿಟ್ಟಿದೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಹಿಂದೆಯೂ ದೇವರಾಜನಾದ ಇಂದ್ರನೂ ಅಸುರರಾಜನಾದ ವಿರೋಚನನೂ ತಮ್ಮ ತಂದೆಯಾದ ಪ್ರಜಾಪತಿ

ಬ್ರಹ್ಮನಿಂದ ತತ್ತ್ವವನ್ನು ತಿಳಿಯಲು ಹೋಗಿದ್ದಾಗ ವಿರೋಚನನು ಅಹಂಕಾರದಿಂದ ವರ್ತಿಸಿದ್ದರ ಫಲವಾಗಿ ತಪ್ಪಾಗಿಯೇ ತಿಳಿದುಕೊಂಡು ಪರಮಪುರುಷಾರ್ಥದಿಂದ ವಂಚಿತನಾದನು. ಇಂದ್ರನು ಮಾತ್ರ ಮತ್ತೆ ಮತ್ತೆ ವಿಚಾರಮಾಡಿ ಸರಿಯಾಗಿ ತಿಳಿದುಕೊಂಡನು - ಎಂಬ ಕಥೆಯಿದೆ. ಆದರಂತೆ ಈಗ ನಾವು ಬುದ್ಧಿಪ್ರಧಾನರಾಗಿಯೇ ವಿಚಾರಮಾಡುತ್ತಾ ನಮಗೆ ತಿಳಿದದ್ದನ್ನೇ ಆತ್ಮತತ್ತ್ವವೆಂದು ವಿರೋಚನನಂತೆ ಪ್ರಚಾರಮಾಡಲು ಸಿದ್ಧರಾಗಿದ್ದೇವೆ. ನಮ್ಮಂಥ ಮಂದಬುದ್ಧಿಗಳನ್ನು ಎಚ್ಚರಿಸಿ ಶ್ರುತಿಯು 'ಬ್ರಹ್ಮವನ್ನರಿಯುವದು ಬುದ್ಧಿಯಿಂದಲ್ಲ - ಮತ್ತೆ ಹೇಗೆಂದರೆ ಅನುಭವದಿಂದ ; ಈ ಅನುಭವವು ಬ್ರಹ್ಮವೇ - ಬ್ರಹ್ಮಕ್ಕಿಂತ ಅನನ್ಯವೇ ಆಗಿದೆ ' - ಎಂದು ತಿಳಿಯಹೇಳುತ್ತಿದೆ. ಅದಕ್ಕಾಗಿಯೇ ಈ ಶಿಷ್ಯಬುದ್ಧಿ ವಿಚಾಲನವನ್ನು ಆಚಾರ್ಯನು ಮಾಡಿರುತ್ತಾನೆ.

೧೪. ಆಗ ಶಿಷ್ಯನು ಚೆನ್ನಾಗಿ ವಿಚಾರಮಾಡಬೇಕಾಗಿಬಂದಿತು. ಆತನು ಏಕಾಂತದಲ್ಲಿ ಕುಳಿತು ಆಚಾರ್ಯನು ಉಪದೇಶಿಸಿದ್ದ ಆಗಮ ಸಂಪ್ರದಾಯದ ಬಲದಿಂದ ತಾನೇ ಒಳಗೆ ವಿಚಾರಮಾಡಿದನು. ಮನೋವಾಕ್ಕುಗಳೆಲ್ಲಕ್ಕೂ ಒಳಗಿರುವದೆಂದರೆ ಯಾವದು ? ಅದು ಹೇಗೆ ಇದ್ದೀತು? ಎಂದು ಬಾಹ್ಯವ್ಯಾಪಾರಗಳನ್ನು ಕೈಬಿಟ್ಟು ಒಳಗೇ ಚಿಂತಿಸಲಾರಂಭಿಸಿದಾಗ ತತ್ತ್ವದ ಪರಿಚಯವು ಆಗಲು ಆರಂಭವಾಯಿತು. ಇದನ್ನೇ ತಪಸ್ಸು ಎನ್ನುವರು. 'ತಪಸಾ ಬ್ರಹ್ಮ ವಿಜಿಜ್ಞಾಸಸ್ವ' ಎಂಬ ಮಾತಿಗೂ ಇದೇ ಅರ್ಥ. ಮನಸ್ಸನ್ನೂ ಇಂದ್ರಿಯಗಳನ್ನೂ ಏಕಾಗ್ರವಾಗಿ ಮಾಡಿಕೊಂಡು ಒಳಗೇ ನಿಂತು ತತ್ತ್ವವನ್ನು ಚಿಂತಿಸುವದೇ ತಪಸ್ಸು. ಮನನವೆಂದರೂ ಇದೇ ; ಕೇಳಿದ ಉಪದೇಶವನ್ನೇ ಚೆನ್ನಾಗಿ ಅರಗುವಂತೆ ಒಳಗೇ ಮೆಲುಕು ಹಾಕುವದು. ಹಾಗೆ ಚಿಂತಿಸುವಾಗ ಬರಬಹುದಾದ ಸಂಶಯಗಳನ್ನೆಲ್ಲ ಆಚಾರ್ಯೋಪದೇಶಬಲದಿಂದ ಪರಿಹರಿಸಿಕೊಳ್ಳಬೇಕು. ಅಂದರೆ ತತ್ತ್ವವನ್ನು ಹಾಗೆ ಏಕಾಗ್ರತೆಯಿಂದ ಶ್ರವಣಮಾಡಬೇಕು. ಶ್ರವಣವು ಚೆನ್ನಾಗಿ ಆಳವಟ್ಟಿದ್ದರೆ ಮನನಕ್ಕೆ ಹೆಚ್ಚಿನ ಸಹಾಯವಾಗುವದು. ಹೀಗೆ ತರ್ಕ

(ಯುಕ್ತಿ) ಗಳಿಂದ ಚೆನ್ನಾಗಿ ಪರಿಶೀಲನೆಮಾಡಿ ಇದೇ ಸರಿ - ಎಂದು ನಿಶ್ಚಯಿಸಿಕೊಂಡ ಶಿಷ್ಯನು ಅದನ್ನು ಅನುಭವಕ್ಕೆ ಹೊಂದಿಸಿ ನೋಡಿದನು. ಇದೇ ನಿದಿಧ್ಯಾಸನ. ತತ್ತ್ವವು ಹಾಗಿದೆಯೆ ? ಎಂದು ನಿಟ್ಟಿಸಿನೋಡಿ ಅರಿಯುವದು. **ಒಡವೆಗಳಿಗೆ ಒಪ್ಪಹಾಕಿ ಬಣ್ಣಕಟ್ಟಿದಂತೆ ಈ ನಿದಿಧ್ಯಾಸನವು ವಸ್ತುವನ್ನು ಸ್ಫುಟವಾಗಿ ಅನುಭವಗೋಚರವಾಗಿಸುವದು.** ಶಿಷ್ಯನು ಹೀಗೆ ತನ್ನ ಅನುಭವಕ್ಕೂ ಒರೆಹಚ್ಚಿ ನೋಡಿ ತತ್ತ್ವವನ್ನು ನಿಸ್ಸಂಶಯವಾಗಿ ಅರಿತವನಾಗಿ ತನ್ನ ಅನುಭವವನ್ನು ಕುರಿತು ಈಗ ಗುರುಗಳಿಗೆ ಹೇಳುತ್ತಿದಾನೆ ; 'ಆಚಾರ್ಯರೆ, ಈಗ ನಾನು ಬ್ರಹ್ಮವನ್ನು ಚೆನ್ನಾಗಿ ಅರಿತುಕೊಂಡೆನು' ಎಂದು ತನ್ನ ಅನುಭವವನ್ನು ತಿಳಿಸಿದನು.

೧೫. ಶ್ರುತಿಯು ಶಿಷ್ಯನು ತನ್ನ ಅನುಭವವನ್ನು ಹೇಳಿದ ರೀತಿಯನ್ನು ಹೀಗೆ ತಿಳಿಸುತ್ತಿದೆ : 'ಗುರುಗಳೆ, ನಾನು ಬ್ರಹ್ಮವನ್ನು ಚೆನ್ನಾಗಿ ತಿಳಿದೆನು' ಎಂದು ತಿಳಿದಿರುವದಿಲ್ಲ, ಹಾಗಾದರೆ 'ನಿನಗೆ ಬ್ರಹ್ಮವು ಗೊತ್ತಾಗಲಿಲ್ಲವೆಂದೇ ಆಯಿತಲ್ಲ' - ಎಂದರೆ ಹಾಗಲ್ಲ. 'ನನಗೆ ಬ್ರಹ್ಮವು ತಿಳಿಯಲಿಲ್ಲ' - ಎಂಬುದೂ ಇಲ್ಲ. ಇದು ಹೇಗೆ ಸರಿ ? ಒಂದು ವಸ್ತುವು ತಿಳಿದೂ ಇಲ್ಲ, ತಿಳಿಯಲಿಲ್ಲ ಎಂಬುದೂ ಇಲ್ಲ - ಎಂದರೆ ಹೇಗೆ ? ಅದನ್ನು ಇಷ್ಟರಲ್ಲೇ ವಿವರಿಸಲಾಗುವದು. ಈಗ ಶಿಷ್ಯನು ತನ್ನ ಮಾತನ್ನು ಪೂರೈಸುತ್ತಿದ್ದಾನೆ. 'ಗುರುಗಳೆ, ಈ ನನ್ನ ಮಾತನ್ನು ನಮ್ಮ ಪೈಕಿ (ಶಿಷ್ಯರೊಳಗೆ) ಯಾವನು ತಿಳಿಯುವನೋ ಅವನೇ ಬ್ರಹ್ಮವನ್ನು ಅರಿತವನಾಗುತ್ತಾನೆ. ಅದು ಯಾವ ಮಾತು ? ಎಂದರೆ 'ನನಗೆ ಬ್ರಹ್ಮವು ತಿಳಿಯಲಿಲ್ಲ ಎಂಬುದಿಲ್ಲ. ತಿಳಿಯಿತು - ಎಂಬುದೂ ಇಲ್ಲ' ಎಂಬುದೇ ಆಗಿದೆ. ಹೀಗೆ ಶಿಷ್ಯನು ತನ್ನ ಅನುಭವವನ್ನು ಸಾರಿದನು.

೧೬. ಈಗ ಶ್ರುತಿಯು ಶಿಷ್ಯಾಚಾರ್ಯಸಂವಾದದಿಂದ ಹಿಂತಿರುಗಿ ತನ್ನ ಸ್ವಂತಮಾತಿನಲ್ಲಿ ಈ ಸಂವಾದದ ತಾತ್ಪರ್ಯವನ್ನು ಹೇಳುತ್ತಿದೆ. ಯಾವನಿಗೆ ಬ್ರಹ್ಮವು **'ಅಮತ'** (ತಿಳಿಯಲ್ಪಡತಕ್ಕದ್ದಲ್ಲ)ವೆಂದು ತಿಳಿಯಲ್ಪಟ್ಟಿರುವದೋ ಅವನಿಗೆ ಬ್ರಹ್ಮವು ಗೊತ್ತಾಗಿರುವದು. ಆದರೆ

ಯಾವನಿಗೆ ಬ್ರಹ್ಮವು 'ಮತ' (ತಿಳಿಯಲ್ಪಟ್ಟದ್ದು) ಎಂದು ತಿಳಿಯಲ್ಪಟ್ಟಿರುವದೋ ಅವನು ಬ್ರಹ್ಮವನ್ನು ಅರಿತವನಲ್ಲ. ಹೀಗೆ ಬ್ರಹ್ಮವು ತಿಳಿದವರಿಗೆ ಅವಿಜ್ಞಾತವಾಗಿದೆ. ತಿಳಿಯದವರಿಗೆ ವಿಜ್ಞಾತವಾಗಿದೆ ಎಂದು ಶ್ರುತಿಯು ಅಭಿಪ್ರಾಯ. ಇದರ ಸಾರವೇನೆಂದರೆ : ಹಿಂದೆಯೇ ತಿಳಿಸಿದಂತೆ ಬ್ರಹ್ಮವನ್ನು ವಾಕ್ಕು ಮನಸ್ಸುಗಳಿಗೆ ವಿಷಯವಾಗಿಸಿಕೊಂಡು ಯಾವನು 'ನಾನು ಬ್ರಹ್ಮವನ್ನು ಅರಿತೆನು' ಎಂದು ಭಾವಿಸುವನೋ ಅವನಿಗೆ ಬ್ರಹ್ಮವು ತಿಳಿಯಲಿಲ್ಲ ಎಂದರ್ಥ. ಏಕೆಂದರೆ ಅವನು ಬ್ರಹ್ಮವನ್ನು ಪ್ರಮೇಯವಾಗಿ ಮಾಡಿಕೊಂಡು ತನ್ನ ಬುದ್ಧಿಗೋಚರವಾಗಿಸಿಕೊಂಡು ತಿಳಿದೆನು - ಎನ್ನುತ್ತಾನೆ. ಈ ಜ್ಞಾನವು ಅನಿತ್ಯ ಮತ್ತು ಪರಿಚ್ಛಿನ್ನ. ಬ್ರಹ್ಮವಾದರೋ ನಿತ್ಯ-ಅಪರಿಚ್ಛಿನ್ನವಾಗಿದೆ. ಆದ್ದರಿಂದ ಈ ತಿಳಿವಳಿಕೆಯು ತಪ್ಪಾಗಿದೆ. ಇದರ ಬದಲು ಯಾವನು 'ಬ್ರಹ್ಮವು ವಾಙ್ಮನಸ್ಸುಗಳಿಗೆ ಗೋಚರವಲ್ಲವಾದ್ದರಿಂದ ವಿಷಯವಾಗಿಸಿಕೊಳ್ಳತಕ್ಕದ್ದಲ್ಲ' ಎಂದೇ ಅರಿಯುವನೋ ಅವನೇ ತಿಳಿದವನು. ಈ ತಿಳಿವಳಿಕೆಯು ಲೌಕಿಕಜ್ಞಾನದಂತೆ ಪರಿಚ್ಛಿನ್ನವಲ್ಲ. ಬ್ರಹ್ಮವನ್ನು ಗುರುತಿಸಲು ಹೀಗೆ ತಿಳಿಯುವದೊಂದೇ ಸಾಧನ.

೧೭. ಇಲ್ಲಿ ಒಂದು ಆಕ್ಷೇಪ : ಬ್ರಹ್ಮವು ತಿಳಿಯಿತು - ಎನ್ನಲಿ, ತಿಳಿಯಲಿಲ್ಲ ಎನ್ನಲಿ - ಎಲ್ಲವೂ ಮನೋವೃತ್ತಿಗಳೇ ಅಲ್ಲವೆ ? ಯಾವ ವೃತ್ತಿಗಳೂ ಬ್ರಹ್ಮವನ್ನು ಮುಟ್ಟಲಾರವಾದ್ದರಿಂದ ತಿಳಿಯಲಿಲ್ಲ ಎಂಬವನಿಗೆ ತಿಳಿಯಿತು ಎಂಬುದಾದರೂ ಹೇಗೆ ಸರಿ ? ಎಂದರೆ ಹಾಗಲ್ಲ. ಬ್ರಹ್ಮವು ನಿತ್ಯಜ್ಞಾತವಾಗಿರುವದರಿಂದ ಅದರ ವಿಷಯಕ್ಕೆ ಹೊಸದಾಗಿ ಜ್ಞಾನವನ್ನುಂಟುಮಾಡಿಕೊಳ್ಳಬೇಕಾಗಿಲ್ಲ. ತಿಳಿಯಲಿಲ್ಲ ಎಂಬುದೂ ನಿಜವಾಗಿ ಬ್ರಹ್ಮದ ಜ್ಞಾನವಲ್ಲ. ಮತ್ತೇನೆಂದರೆ ತಿಳಿವು, ತಿಳಿವಿಲ್ಲದಿರುವಿಕೆ- ಇವೆರಡೂ ಬ್ರಹ್ಮಕ್ಕಿಂತ ಬೇರೆಯೇ, ಅನಾತ್ಮಗಳೇ ಆಗಿವೆ. ಆದರೂ ಕೆಲವು ವೇಳೆ ನೆರಳಿನಿಂದ ಮನುಷ್ಯನನ್ನು ಊಹಿಸುವಂತೆ ಇವುಗಳ ದ್ವಾರದಿಂದ ಬ್ರಹ್ಮವನ್ನು ಗೊತ್ತುಪಡಿಸಬಹುದಾಗಿದೆ. ಹೇಗೆಂದರೆ ಇವುಗಳು ತೋರಲಿ, ತೋರದಿರಲಿ - ಯಾವದು ತಾನೇತಾನಾಗಿ ಅನುಭವಗೋಚರ

ವಾಗಿದೆಯೋ ಅದೇ ಬ್ರಹ್ಮವು. ಉದಾಹರಣೆಗೆ ಎಚ್ಚರದಲ್ಲಿ ಇಂದ್ರಿಯ ಜ್ಞಾನಗಳು ಇರುತ್ತವೆ. ಕನಸಿನಲ್ಲಿ ಕೇವಲ ಮನಸ್ಸಿನ ವೃತ್ತಿಗಳು ಮಾತ್ರ ಕೆಲಸಮಾಡು ತ್ತಿರುತ್ತವೆ. ಆದರೂ ಆ ಕಾಲಕ್ಕೆ ಅಲ್ಲಿ ಎಲ್ಲವೂ ನಿಜವಾಗಿರುವವೆಂದೇ ನಾವು ಭಾವಿಸುತ್ತೇವೆ. ಗಾಢನಿದ್ರೆಯಲ್ಲಿ ಏನೂ ತೋರುವದೇ ಇಲ್ಲ. ಅಲ್ಲಿ ಏನೂ ತೋರಲಿಲ್ಲ ಎಂದೂ ಆಗ್ಗೆ ಗೊತ್ತಾಗುವದಿಲ್ಲ. ಎಚ್ಚೆತ್ತಮೇಲೆ ಮಾತ್ರ ಅಲ್ಲಿ ಏನೂ ತೋರಲಿಲ್ಲ - ಎನ್ನುವೆವು. ಹೇಗೆ ಆಗಲಿ, ಎಚ್ಚರದಲ್ಲಿ ಜ್ಞಾತೃಜ್ಞಾನಜ್ಞೇಯವ್ಯವಹಾರವಿತ್ತು, ಕನಸಿನಲ್ಲಿ ಜ್ಞಾತೃವೊಬ್ಬನೇ ಇದ್ದು ಜ್ಞಾನಜ್ಞೇಯಗಳಾಗಿಯೂ ತೋರುತ್ತಿದ್ದನು. ತನಿನಿದ್ರೆಯಲ್ಲಿ ಜ್ಞಾತೃವೂ ತೋರಲಿಲ್ಲ ಎಂಬ ಅನುಭವವು ನಮಗೆ ಇದೆಯಷ್ಟೆ. ಈ ಅನುಭವವನ್ನು ನಾವು ಯಾವ ಇಂದ್ರಿಯಮನಸ್ಸುಗಳಿಂದಲೂ ಅನುಭವಿಸಲಿಲ್ಲ ; ನೇರಾಗಿ ಅನುಭವಿಸಿದೆವು - ಅಲ್ಲವೆ ? ಇದೇ **ಆತ್ಮಾನುಭವ.** ಈ ಆತ್ಮನೇ ಅನುಭವವು. ಅನುಭವವೇ ಆತ್ಮನು. ಇಲ್ಲಿ ಅನುಭವಿತೃ, ಅನುಭವ - ಎಂಬ ಭೇದವಿಲ್ಲ. ಹೀಗೆ ನಾವು ಎಲ್ಲಾ ಅನಾತ್ಮಗಳನ್ನೂ ನೇರಾಗಿ ಆತ್ಮಾನುಭವದಿಂದಲೇ ಗುರುತಿಸುತ್ತಿದ್ದೇವಾದ್ದರಿಂದ ಅನಾತ್ಮಗಳನ್ನೇ ನೆಪಮಾಡಿಕೊಂಡು ಆತ್ಮಾನುಭವವನ್ನು ಶ್ರುತಿಯು ತೋರಿಸಿಕೊಟ್ಟು ಕೊನೆಯಲ್ಲಿ ತಾನೂ ವಿಶ್ರಾಂತವಾಗುತ್ತದೆ. ಆಗ ದ್ವೈತರಹಿತವಾದ ಆತ್ಮವೊಂದೇ ಉಳಿಯುತ್ತದೆ. ಇದೇ 'ಅಮತ' ಎಂದರೆ ಮತ , ಅಮತ - ಇವುಗಳ ಮೂಲವಾದ ಸಾಕ್ಷಿ. ಅಮತ ಎಂಬುದೂ ಇದರಲ್ಲಿ ಉಪಚಾರಕ್ಕಾಗಿ ಹೇಳಿದ್ದು. ಹೀಗೆ ಯಾವನು ವಿದಿತಾವಿದಿತಗಳಿಗಿಂತ ವಿಲಕ್ಷಣವಾದ ತತ್ತ್ವವನ್ನು ತನ್ನ ಸ್ವರೂಪವೇ ಆಗಿದೆಯೆಂತ ಅನುಭವಿಸು ವನೋ ಅವನೇ ಬ್ರಹ್ಮವಿದನು - ಎಂದು ತಾತ್ಪರ್ಯ.

--------

# ೩. ಪ್ರತ್ಯಗಾತ್ಮಾವಬೋಧ

೧೮. **'ಅವಿಜ್ಞಾತಂ ವಿಜಾನತಾಮ್ ವಿಜ್ಞಾತಮವಿಜಾನತಾಮ್'** ಎಂಬಲ್ಲಿ ತಿಳಿದಿದ್ದೇನೆ ಎಂಬವನಿಗೆ ಬ್ರಹ್ಮವು ತಿಳಿಯಲಿಲ್ಲ - ಎಂದು ಹೇಳಿದೆಯಷ್ಟೆ, ಅಲ್ಲಿ ಶ್ರುತಿಯು ತಿಳಿದವನಿಗೇ ತಿಳಿಯಲಿಲ್ಲ - ಎಂದರೆ ಇನ್ನು ತಿಳಿಯದವನಿಗೆ ಹೇಗೆ ತಿಳಿದೀತು ? ಎಂಬ ದೃಷ್ಟಿಯನ್ನವಲಂಬಿಸಿ ತಿಳಿಯುವದರ ತಿಳಿವು ಎಂದರೇನು ? ಎಂಬುದನ್ನು ವಿವರಿಸಲು ಪುನಃ ಉಪದೇಶಿಸುತ್ತಿದೆ. ಮತ್ತು ತಿಳಿದವರಿಗೂ ಬ್ರಹ್ಮವು ಗೊತ್ತಿಲ್ಲ, ತಿಳಿಯದವರಿಗಂತೂ ಇಲ್ಲವೇ ಇಲ್ಲ - ಎಂದಾದರೆ ಬ್ರಹ್ಮಜ್ಞಾನಿಗಳಿಗೂ ಸಾಮಾನ್ಯರಿಗೂ ವಿಶೇಷವೇನು ? ಎಲ್ಲರೂ ಒಂದೇ ಆಯಿತಲ್ಲ! - ಎಂದು ಯಾರಾದರೂ ಶಂಕಿಸಬಹುದೆಂತ ಭಾವಿಸಿ ಉತ್ತರವನ್ನು ಹೇಳುತ್ತಿದೆ ;

ಪ್ರತಿಬೋಧವಿದಿತಂ ಮತಮಮೃತತ್ವಂ ಹಿ ವಿನ್ದತೇ ।
ಆತ್ಮನಾ ವಿನ್ದತೇ ವೀರ್ಯಂ ವಿದ್ಯಯಾ ವಿನ್ದತೇಽಮೃತಮ್ ॥

'ಒಂದೊಂದು ಬೋಧದಲ್ಲಿಯೂ ವಿದಿತವಾಗುತ್ತಿರುವ ಬ್ರಹ್ಮವನ್ನು ಅರಿಯಬೇಕು. ಇದರಿಂದ ಅಮೃತತ್ವವನ್ನು ಪಡೆಯುತ್ತಾನೆ. ಆತ್ಮನಿಂದ ವೀರ್ಯವನ್ನು ಹೊಂದುವನು, ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ'- ಎಂದು ಈ ಮಂತ್ರಕ್ಕೆ ಸಾಮಾನ್ಯವಾದ ಅರ್ಥ.

೧೯. ಈಗ **'ಪ್ರತಿಬೋಧವಿದಿತಮ್'**- ಎಂಬುದರ ಅರ್ಥವೇನೆಂಬುದನ್ನು ವಿಚಾರಮಾಡೋಣ. ಬೋಧ ಎಂದರೆ ಪ್ರತ್ಯಯಗಳು ಎಂದರ್ಥ. ಪ್ರತ್ಯಯಗಳೆಂದರೆ : ಒಂದು ವಿಷಯವನ್ನು ಅರಿಯುವಾಗ ಮನಸ್ಸು ಆ ವಸ್ತುವಿನ ಆಕಾರವಾಗಿ ಪರಿಣಾಮವಾಗುತ್ತದೆ. ಅನಂತರ ಇಂದ್ರಿಯದ ಮೂಲಕ ಅದು ವಸ್ತುವನ್ನು ವ್ಯಾಪಿಸಿಕೊಂಡಾಗ ವಸ್ತುವಿನ ಜ್ಞಾನವಾಗುತ್ತದೆ. ಉದಾಹರಣೆಗೆ ಒಂದು ಮಾವಿನಹಣ್ಣು ಇದೆ- ಎಂದು ನಮಗೆ ಜ್ಞಾನವಾಯಿತೆಂದು ಇಟ್ಟುಕೊಳ್ಳೋಣ. ಇಲ್ಲಿ ನಮ್ಮ ಮನಸ್ಸು ಕಣ್ಣಿನ ಮೂಲಕ ವಿಷಯವಾದ ಹಣ್ಣನ್ನು ವ್ಯಾಪಿಸಿ ಮಾವಿನಹಣ್ಣಿನ ಆಕಾರವಾಗಿ

ಪರಿಣಮಿಸಿದಾಗ ನಮಗೆ ಮಾವಿನಹಣ್ಣಿನ ಜ್ಞಾನವಾಯಿತು- ಎನ್ನುತ್ತೇವೆ. ಇದು ಶಾಸ್ತ್ರಕಾರರ ಪ್ರಕ್ರಿಯೆ- ಎಂದರೆ ವರ್ಣನೆ. ಲೌಕಿಕರು ಇಷ್ಟೆಲ್ಲ ವಿಚಾರಿಸುವದಿಲ್ಲ. 'ಹಣ್ಣು ಇದೆ, ನಾನು ನೋಡುತ್ತಿದ್ದೇನೆ'- ಎಂದಿಷ್ಟೇ ಭಾವಿಸುತ್ತಾರೆ. ವ್ಯವಹಾರಕ್ಕೆ ಅಷ್ಟೇ ಸಾಕಾಗಿದೆ. ಮೇಲಿನ ವಿಶ್ಲೇಷಣೆ ಏನೂ ಬೇಕಿಲ್ಲ - ಎಂಬುದು ಸರಿಯೆ. ಆದರೆ ಶಾಸ್ತ್ರದೃಷ್ಟಿಯಿಂದ ವಿಚಾರ ಮಾಡಿದಾಗ ಮೇಲಿನಂತೆ ಸಿದ್ಧವಾಗುತ್ತದೆ. ಇರಲಿ. ಈಗ ಮನಸ್ಸು ಹೀಗೆ ವಿಷಯಾಕಾರವಾಗಿ ಪರಿಣಮಿಸದೆ ಯಾವದನ್ನೂ ಅರಿಯಲಾರದಾದ್ದರಿಂದ ಒಂದೊಂದು ಬಾರಿಗೆ ಒಂದೊಂದೇ ವಿಷಯವನ್ನು ಮಾತ್ರ ಅದು ತಿಳಿಯಬಲ್ಲದು. ಮನಸ್ಸು ಒಂದೇ ಆಗಿರುವದರಿಂದ ಅದು ಯಾವ ಇಂದ್ರಿಯದ ಮೂಲಕ ಹೊರಮುಖವಾಗಿ ವಿಷಯಾಕಾರವನ್ನು ಹೊಂದುತ್ತದೋ ಆ ಪ್ರಮೇಯದ ಏಕದೇಶಜ್ಞಾನವು ಮಾತ್ರ ಆಗುತ್ತದೆ. ಅಂದರೆ ಕಣ್ಣಿನ ಮೂಲಕ ಪ್ರವರ್ತಿಸಿದಾಗ ಮಾವಿನಹಣ್ಣಿನ ಆಕಾರ, ಬಣ್ಣ- ಇಷ್ಟು ಮಾತ್ರವೇ ಗೊತ್ತಾಗುವದು. ಹಣ್ಣಿನ ರುಚಿಯಾಗಲಿ ಅದರ ಸ್ಪರ್ಶ (ಮೆದು, ಕಠಿಣ)ವಾಗಲಿ ತಿಳಿಯುವದಿಲ್ಲ. ಏಕೆಂದರೆ ಅವುಗಳನ್ನು ಅರಿಯಲು ಮತ್ತೆ ನಾಲಗೆ ಹಾಗೂ ಚರ್ಮದ ಮೂಲಕ ಅದು ಪ್ರವರ್ತಿಸಬೇಕು. ಹೀಗಿದೆ , ಈ ಮನಸ್ಸಿನ ಸ್ಥಿತಿ. ಆದ್ದರಿಂದ ಇದು ಇಂದ್ರಿಯಗಳ ಮೂಲಕ ಹರಿದಾಗ ಯಾವ ಆಕಾರವಾಗುತ್ತದೆಯೋ ಅದನ್ನು **ವೃತ್ತಿ** ಎಂದು ಕರೆಯುತ್ತಾರೆ. ಇವೇ ಪ್ರತ್ಯಯಗಳು. ಪ್ರತ್ಯಯವೆಂದರೂ ವೃತ್ತಿಯೆಂದರೂ ಒಂದೇ. ಈ ಪ್ರತ್ಯಯದ ಕೊನೆಯಲ್ಲಿ ತೋರುವ ಚೈತನ್ಯವೇ ಫಲವು ; ಇದೇ ಆತ್ಮ. ಇದು ಪ್ರತ್ಯಯವುಂಟಾಗುವ ಮೊದಲೂ ಅನಂತರವೂ ಇದ್ದುಕೊಂಡೇ ಇರುತ್ತದೆ. ಲೌಕಿಕರು ಇದನ್ನೇ ಹಣ್ಣಿನ ಜ್ಞಾನವಾಯಿತು- ಎಂದು ವ್ಯವಹರಿಸುತ್ತಾರೆ. ಆದರೆ ನಿಜವಾಗಿ ನಾವು ಅನುಭವಿಸಿದ್ದು ಆತ್ಮವೇ. ಈ ಆತ್ಮವನ್ನರಿಯದೆ ಇರುವದರಿಂದ ವೃತ್ತಿರೂಪವಾದ ಜ್ಞಾನವೇ ಫಲವೆಂದು ನಂಬಿ ವ್ಯವಹರಿಸುವದರಿಂದ ಪ್ರಮೇಯಪದಾರ್ಥವು ಮರೆಯಾದಾಗ, ಅಥವಾ ಮನಸ್ಸೇ ಬೇರೆಯ

ವೃತ್ತ್ಯಾಕಾರವಾಗಿ ಪರಿಣಾಮವಾದಾಗ ಈ ಮೊದಲನೆಯ ವೃತ್ತಿಯು ನಾಶವಾಗಿಬಿಡುವದು. ಇದನ್ನೇ ನಾವು ಜ್ಞಾನವುಂಟಾಯಿತು, ಜ್ಞಾನವು ಹೋಯಿತು- ಎಂದು ಹೇಳುತ್ತೇವೆ.

೨೦. ಅಧ್ಯಾತ್ಮಶಾಸ್ತ್ರಕಾರರು ಈ ವೃತ್ತಿಜ್ಞಾನ(ಪ್ರತ್ಯಯ)ವನ್ನು ಉಪಯೋಗಿಸಿಕೊಂಡು ನಿಜವಾದ ಆತ್ಮನನ್ನು ಗುರುತಿಸುವ ಉಪಾಯವನ್ನು ಇಲ್ಲಿ ಹೇಳಿಕೊಡುತ್ತಿದ್ದಾರೆ. ಒಂದೊಂದು ವೃತ್ತಿಗೂ ಆಧಾರನಾಗಿ ಅವುಗಳ ತಿರುಳಾಗಿ ಆತ್ಮನೇ ತೋರಿಕೊಳ್ಳುತ್ತಿದ್ದಾನೆ. ಅವನನ್ನು ಗುರುತುಹಿಡಿಯಿರಿ- ಎನ್ನುತ್ತಾರೆ. ಈ ಸಂದರ್ಭದಲ್ಲಿ ಶ್ರೀಶಂಕರಭಗವತ್ಪಾ ದರ ಒಂದು ಭಾಷ್ಯವಾಕ್ಯವನ್ನು ಮನನಮಾಡುವದು ಸಮಯೋಚಿತ ವಾಗಿದೆ. ಭಾಷ್ಯಕಾರರು ಹೀಗೆನ್ನುವರು : **"ಸರ್ವೇ ಪ್ರತ್ಯಯಾ ವಿಷಯೀ ಭವನ್ತಿ ಯಸ್ಯ ಸ ಆತ್ಮಾ ಸರ್ವಬೋಧಾನ್ ಪ್ರತಿಬುಧ್ಯತೇ ಸರ್ವಪ್ರತ್ಯಯ ದರ್ಶೀ ಚಿಚ್ಛಕ್ತಿಸ್ವರೂಪಮಾತ್ರಃ ಪ್ರತ್ಯಯೈರೇವ ಪ್ರತ್ಯಯೇಷ್ವ ವಿಶಿಷ್ಟತಯಾ ಲಕ್ಷ್ಯತೇ, ನಾನ್ಯದ್ ದ್ವಾರಮಾತ್ಮನೋ ವಿಜ್ಞಾನಾಯ"** ಈ ವಾಕ್ಯದ ಅಭಿಪ್ರಾಯವೇನೆಂದರೆ : ಯಾವನಿಗೆ ಎಲ್ಲಾ ಪ್ರತ್ಯಯಗಳೂ ವಿಷಯವಾಗು ವವೋ ಅವನೇ ಆತ್ಮನು. ಆ ಆತ್ಮನು ಎಲ್ಲಾ ಪ್ರತ್ಯಯಗಳನ್ನೂ ತನ್ನ ಚಿಚ್ಛಕ್ತಿ ಸ್ವರೂಪಮಾತ್ರದಿಂದ ಯಾವ ವಿಕಾರವನ್ನೂ ಹೊಂದದೆ ನೋಡುತ್ತಾ ಇರುವನು. ಇಂಥ ಆತ್ಮನು ಈ ಪ್ರತ್ಯಯಗಳೊಡಗೂಡಿಕೊಂಡೇ ಅವುಗಳ ಜೊತೆಯಲ್ಲೇ ತೋರಿಕೊಳ್ಳುವನು. ಆದ್ದರಿಂದ ಈ ಆತ್ಮನನ್ನು ತಿಳಿಯಲು ಪ್ರತ್ಯಯಗಳೇ ದ್ವಾರಗಳು- ಎಂದರೆ ಉಪಾಯಗಳು, ಬೇರೆ ಉಪಾಯವಿಲ್ಲ ಎಂಬುದು ಮೇಲಿನ ವಾಕ್ಯದ ಅಭಿಪ್ರಾಯ. ಇಲ್ಲಿ 'ಚಿಚ್ಛಕ್ತಿಸ್ವರೂಪಮಾತ್ರಃ' ಎಂಬುದು ಆತ್ಮನ ನಿರ್ದೇಶ. ಆತ್ಮನು ಪ್ರತ್ಯಯಗಳನ್ನು ವಿಷಯವಾಗಿಸಿ ಕೊಳ್ಳುತ್ತಾನೆ ಎಂಬುದು ಔಪಚಾರಿಕ. ಏಕೆಂದರೆ ಅಂಥ ಜ್ಞಾನಕರ್ತೃತ್ವ ವೇನೂ ಅವನಲ್ಲಿಲ್ಲ. ಅವನ ಸನ್ನಿಧಾನ ಮಾತ್ರದಿಂದ ಈ ಪ್ರತ್ಯಯಗಳು ತೋರುತ್ತಿವೆ- ಎಂಬುದು ವಿವಕ್ಷಿತ. ಬ್ರಹ್ಮದ ವಿಜ್ಞಾನವೆಂದರೆ ಸೂರ್ಯನ ಪ್ರಕಾಶದಂತೆ ಅಥವಾ ಬೆಂಕಿಯ ಬಿಸಿಯಂತೆ ಬ್ರಹ್ಮದ ಸ್ವರೂಪವೇ ಹೊರತು

ಬೇರೆಯಲ್ಲ. ಆದ್ದರಿಂದ ಚಿತ್ ಎಂದರೂ ಶಕ್ತಿ ಎಂದರೂ ಎಲ್ಲವೂ ಆತ್ಮನೇ. ಹೀಗಿರುವದರಿಂದ ಯಾವ ಯಾವ ಉಪಾಧಿಗಳ ಮೂಲಕ ಆತ್ಮನು ಮಾರುಹೊಳೆಯವನೋ ಆಯಾ ಉಪಾಧಿಗಳನ್ನೇ ನಿಮಿತ್ತಮಾಡಿಕೊಂಡು ಆತ್ಮನನ್ನು ಗುರುತಿಸಬೇಕು. ಉಪಾಧಿಗಳನ್ನು ಕೈಬಿಡಬೇಕು. ಇದೊಂದು ದೊಡ್ಡ ಅಧ್ಯಾತ್ಮಸಾಧನವೇ ಸರಿ. ಹೀಗೆ ಪ್ರತ್ಯಯಗಳೊಡನೆಯೇ ಪ್ರತಿಯೊಂದು ಜ್ಞಾನದಲ್ಲಿಯೂ ಆತ್ಮನೇ ಕಂಡುಬರುತ್ತಿರುವದರಿಂದ ಆತ್ಮನು **''ಪ್ರತಿಬೋಧವಿದಿತ''**, ಒಂದೊಂದು ಪ್ರತ್ಯಯದಿಂದಲೂ ತಿಳಿದು ಬರುವವನು- ಎಂದು ಶ್ರುತಿಯು ಹೇಳುತ್ತಿದೆ. ಇದನ್ನು ಆಚಾರ್ಯರು ಹೀಗೆ ವಿವರಿಸಿದ್ದಾರೆ : **''ಅತಃ ಪ್ರತ್ಯಯಪ್ರತ್ಯಗಾತ್ಮತಯಾ ವಿದಿತಂ ಬ್ರಹ್ಮ ಯದಾ ತದಾ ತನ್ಮತಂ ತತ್ಸಮ್ಯಗ್ದರ್ಶನಮ್ ಇತ್ಯರ್ಥಃ''**- ಇದರ ಅಭಿಪ್ರಾಯವೇನೆಂದರೆ : ಎಲ್ಲಾ ಪ್ರತ್ಯಯಗಳಿಗೂ ಆಧಾರವಾಗಿ ಅವುಗಳ ತಿರುಳಾಗಿರುವ ಬ್ರಹ್ಮವು ಎಂದೆಂದೂ ತಾನೇತಾನಾಗಿ ಇದ್ದುಕೊಂಡು ಪ್ರತ್ಯಯಗಳ ಮೂಲಕ ಹೊರ ತೋರಿಕೊಳ್ಳುತ್ತಿದೆ. ಆದರೆ ಪ್ರತ್ಯಯಗಳು ಎಂದಿಗೂ ಆತ್ಮನನ್ನು ಬೆಳಗಲಾರವು. ಯಾವನ ಬೆಳಕಿನಿಂದ ಇವು ಪ್ರತ್ಯಯಗಳೆನಿಸಿಕೊಂಡು ತೋರಿಕೊಳ್ಳುತ್ತಿವೆಯೋ ಅವನೇ ಆತ್ಮನು, ಅದೇ ಬ್ರಹ್ಮವು- ಎಂದು ಅರಿತರೆ ಸಮ್ಯಗ್ದರ್ಶನವಾಯಿತು - ನಿಜವಾದ ಅರಿವು ಆಯಿತು- ಎಂದು ಅರ್ಥ.

೨೧. ಈವರೆಗಿನ ವಿಚಾರಸರಣಿಯಿಂದ ತೀರ್ಮಾನವಾಗುವದೇನೆಂದರೆ ಎಲ್ಲಾ ಪ್ರತ್ಯಯಗಳನ್ನೂ ಆತ್ಮನು ನೋಡುತ್ತಾನೆಂದದ್ದರಿಂದ ಪ್ರತ್ಯಯಗಳು ತೋರಲಿ, ಮರೆಯಾಗಲಿ- ಅವುಗಳ ಹಂಗಿಲ್ಲದೆ ಆ ಪ್ರತ್ಯಯಗಳು ಹುಟ್ಟುವ ಮುಂಚೆಯೂ ಮರೆಯಾದ ಅನಂತರವೂ ಆತ್ಮನು ಇದ್ದೇ ಇರುತ್ತಾನೆ ; ಮತ್ತು ಯಾವಾಗಲೂ ಈ ಆತ್ಮನು ದೃಕ್‌ಸ್ವರೂಪನೇ ಎಂದರೆ ದ್ರಷ್ಟೃವಿನ ಆತ್ಮನೇ ಆಗಿರುತ್ತಾನೆ. ದ್ರಷ್ಟೃವಿನ ಆತ್ಮ ಎಂದರೆ **'ನಾನು ನೋಡುವವನು' ಎಂದು ನಾವು ಭಾವಿಸಿರುತ್ತೇವಷ್ಟೆ! ಅಲ್ಲಿ 'ನಾನು ದ್ರಷ್ಟೃ' ಎಂಬುದು ನಮಗೆ ಹೇಗೆ ಗೊತ್ತಾಯಿತು ? ಎಂದು ಯೋಚಿಸಿದರೆ**

**ದ್ರಷ್ಟೃವಿನ ದ್ರಷ್ಟೃವಾದ ಆತ್ಮನು ತಿಳಿದುಬರುತ್ತಾನೆ.** ಇವನು ಯಾವಾಗಲೂ ದೃಶ್ಯವಾಗುವ ಸಂಭವವೇ ಇಲ್ಲ. ಆದ್ದರಿಂದ ನಿತ್ಯದೃಗ್‌ಸ್ವರೂಪನು. ಇನ್ನು ಪ್ರತ್ಯಯಗಳ ಸಂಪರ್ಕವಿಲ್ಲದ್ದರಿಂದ ಇವನಲ್ಲಿ ಯಾವ ವಿಕಾರವೂ ಇಲ್ಲದೆ ಶುದ್ಧನಾಗಿರುತ್ತಾನೆ. ಇವನ ಆಲಂಬನವಿಲ್ಲದೆ ಯಾವ ಪ್ರತ್ಯಯವೂ ತೋರಲಾರದಾದ್ದರಿಂದ ಇವನೇ ಎಲ್ಲಕ್ಕೂ ಪ್ರತ್ಯಗಾತ್ಮನು- ಎಂದರೆ ಒಳಗಿನ ತಿರುಳಾಗಿರುತ್ತಾನೆ. ಈ ಆತ್ಮನು ಯಾವದೊಂದು ವಸ್ತುವಿನ ವಿಶೇಷ ಆಕಾರವಾಗಿಯೂ ತೋರಿಕೊಳ್ಳದೆ ಕೇವಲ ಸದ್ರೂಪನಾಗಿಯೇ ಇರುತ್ತಾನೆ. ತೋರಿಕೆಯು ಇಲ್ಲದಾಗ ಇವನು ತಾನೇ ತಾನಾಗಿರುವದರಿಂದ ನಿರ್ವಿಶೇಷನೂ ಏಕನೂ ಆಗಿರುತ್ತಾನೆ ; ಮತ್ತು ಎಲ್ಲಾ ಪ್ರಾಣಿಗಳಲ್ಲಿಯೂ ತಾನೊಬ್ಬನೇ ತೋರುತ್ತಾನಾದ್ದರಿಂದ ಸರ್ವಭೂತಾತ್ಮನಾಗಿರುತ್ತಾನೆ. ಇವನನ್ನೇ ಮಾಂಡೂಕ್ಯೋಪನಿಷತ್ತಿನಲ್ಲಿ **"ಏಕಾತ್ಮಪ್ರತ್ಯಯಸಾರಮ್"** ಎಂದಿದ್ದಾರೆ. ಹಿಂದೆ ಪುಟ ೧೪ರಲ್ಲಿ ಹೇಳಿರುವಂತೆ ಎಚ್ಚರವೇ ಮುಂತಾದ ಎಲ್ಲಾ ಅವಸ್ಥೆಗಳಿಗೂ ಸಾಕ್ಷಿಯಾಗಿ 'ತಾನೊಬ್ಬನೇ ಕಂಡುಬರುತ್ತಿದ್ದಾನೆ' ಎಂಬ ಪ್ರತ್ಯಯವೊಂದರಿಂದ ಇವನನ್ನು ಗುರುತಿಸಿ ತಿಳಿಯಬೇಕು- ಎಂದರ್ಥ. ಅಥವಾ ಎಲ್ಲಾ ಪ್ರಾಣಿಗಳಲ್ಲಿಯೂ ನಾನು (ಆತ್ಮ) ಎಂದೇ ತೋರುತ್ತಿರುವ ಈ ಆತ್ಮಪ್ರತ್ಯಯವನ್ನು ದ್ವಾರವಾಗಿ ಮಾಡಿಕೊಂಡು ನಾನು- ಎಂಬುದರ ಪರಮಾರ್ಥವೇ ಈ ಬ್ರಹ್ಮವು ಎಂದರಿಯಬೇಕು. ಇದೇ ಏಕಾತ್ಮಪ್ರತ್ಯಯಸಾರನೆಂಬುದರ ತಾತ್ಪರ್ಯ. ಆದ್ದರಿಂದ ಪ್ರತಿಬೋಧ ವಿದಿತನೂ- ಏಕಾತ್ಮಪ್ರತ್ಯಯಸಾರನೂ ಆಗಿರುವ ಈ ಆತ್ಮನನ್ನು ಹೊಸದಾಗಿ ಸಿದ್ಧಗೊಳಿಸಬೇಕಾಗಿಲ್ಲ. ಈತನು ಸ್ವತಃಸಿದ್ಧನು. ಪ್ರತ್ಯಯಗಳ ಮೂಲಕ ಇವನನ್ನು ಅರಿಯುವ ಪ್ರಯತ್ನವನ್ನು ಮಾಡಬೇಕು- ಎಂದರೆ ಅನಾತ್ಮಪ್ರತ್ಯಯಗಳೆಲ್ಲವನ್ನೂ ಸಂಪೂರ್ಣವಾಗಿ ಇಲ್ಲವಾಗಿಸಿದರೆ ಆತ್ಮನೇ ಕಂಡುಬರುತ್ತಾನೆ- ಎಂದು ಅರ್ಥ.

ಇಲ್ಲಿ ಶ್ರುತಿಯು ಹೀಗೆ ಆತ್ಮನನ್ನರಿಯುವದರ ಫಲವೇನೆಂಬುದನ್ನು ತಿಳಿಯಪಡಿಸುತ್ತಿದೆ. ಹೇಗೆಂದರೆ **"ಆತ್ಮನಾ ವಿನ್ದತೇ ವೀರ್ಯಂ ವಿದ್ಯಯಾ**

**ವಿನ್ದತೇಽಮೃತಮ್''** ಆತ್ಮನಿಂದಲೇ ವೀರ್ಯವನ್ನು ಪಡೆಯುತ್ತಾನೆ. ವಿದ್ಯೆಯಿಂದ ಅಮೃತವನ್ನು ಪಡೆಯುತ್ತಾನೆ- ಎಂದು ಹೇಳಿದೆ. ಈ ಆತ್ಮನನ್ನು ಯಾವನು ಈವರೆಗೆ ವಿವರಿಸಿರುವಂತೆ ವಿಚಾರಿಸಿ ತನ್ನಲ್ಲೇ ಅರಿತುಕೊಳ್ಳು ವನೋ ಅವನು ವೀರ್ಯವನ್ನು ಎಂದರೆ ಬಲಸಾಮರ್ಥ್ಯಗಳನ್ನು ಪಡೆಯುವನು. ಈ ವೀರ್ಯವು ಶಾಶ್ವತವಾದದ್ದು, ಧನಸಂಪತ್ತಿ, ಮಂತ್ರ, ಔಷಧಿ, ತಪಸ್ಸು, ಯೋಗ- ಇವುಗಳಿಂದುಂಟಾದ ವೀರ್ಯವು ಮೃತ್ಯು ವನ್ನು ಜಯಿಸಲು ಸಮರ್ಥವಾಗಲಾರದು. ಏಕೆಂದರೆ ಧನಾದಿಗಳು ಕ್ಷಯವಾಗತಕ್ಕವುಗಳು ; ಅವು ಕ್ಷಯವಾದಂತೆಲ್ಲ ವೀರ್ಯವೂ ಕುಗ್ಗುತ್ತದೆ. ಆತ್ಮಬಲವು ಅಂಥದಲ್ಲ. ಆತ್ಮನು ನಿತ್ಯನಾಗಿರುವದರಿಂದ ಬೆಂಕಿಯ ಬಿಸಿಯಂತೆ ಆತ್ಮಸ್ವರೂಪಭೂತವೇ ಆದ ಬಲವು ಶಾಶ್ವತವಾಗಿರುವದು. ಆದ್ದರಿಂದ ಅದು ಮೃತ್ಯುವನ್ನು ಜಯಿಸಲು ಸಮರ್ಥವಾಗಿರುವದು.

ಇನ್ನು ಆತ್ಮವಿದ್ಯೆಯ ಮತ್ತೊಂದು ಫಲವೆಂದರೆ ಅಮೃತತ್ವ. ಆತ್ಮನನ್ನು ಅರಿತುಕೊಳ್ಳುವದೆಂಬ ವಿದ್ಯೆಯು ಅಮೃತತ್ವಕ್ಕೆ ಸಾಧನವಾಗಿ ರುತ್ತದೆ. ಆದ್ದರಿಂದಲೇ **'ಅಮೃತತ್ವಂ ಹಿ ವಿನ್ದತೇ'** ಎಂದು ಸಮರ್ಥಿಸಿ ಹೇಳಿರುತ್ತದೆ. ಇಂಥ ಅಮೃತತ್ತ್ವವೇ ಪರಮಫಲವು.

೨೨. ಈಗ ಈ ಪ್ರತಿಬೋಧವಿದಿತವೆಂಬುದರ ಅನುಸಂಧಾನವು ನಮಗೆ ಎಷ್ಟುಮಟ್ಟಿಗೆ ಸಾಧ್ಯ ಎಂಬುದನ್ನು ತಿಳಿಸಿ ಈ ವಿಷಯವನ್ನು ಉಪಸಂಹಾರಮಾಡುವೆನು. ಈಗಿನ ಕಾಲಕ್ಕೆ ಮನುಷ್ಯನಿಗೆ ಜೀವನ ನಿರ್ವಹಣೆಯೇ ಕಷ್ಟವಾಗಿರುವಾಗ ಕಠಿಣವಾದ ಅಧ್ಯಾತ್ಮಸಾಧನಗಳಿಗೆ ಬಿಡುವೂ ಅನುಕೂಲವೂ ದೊರೆಯಲಾರದು. ಆದ್ದರಿಂದ ಅಧ್ಯಾತ್ಮಾಭಿ ರುಚಿಯುಳ್ಳ ಸಾಮಾನ್ಯಸಾಧಕನು ಸರಿಯಾದ ಗುರುವಿನಿಂದ ಶಾಸ್ತ್ರಕ್ಕೆ ಅನುಸಾರವಾಗಿ ಈ ಆತ್ಮೋಪದೇಶವನ್ನು ಕೇಳಿ ಮತ್ತೆಮತ್ತೆ ದೃಢಪಡಿಸಿ ಕೊಂಡು ಚಾಂಚಲ್ಯವಿಲ್ಲದೆ ಪ್ರತಿದಿನವೂ ಒಂದು ಗೊತ್ತಾದ ಕಾಲದಲ್ಲಿ ಏಕಾಂತದಲ್ಲಿ ಕುಳಿತು ಈ ಪ್ರತ್ಯಯಗಳ ಮೂಲವನ್ನು ಅರಸುವ ಪ್ರಯತ್ನ ವನ್ನು ಮಾಡಬೇಕು. ಮೊದಮೊದಲು ಇದು ಏನೂ ಪ್ರಯೋಜನ

ವಿಲ್ಲವೆಂಬಂತೆ ತೋರಬಹುದು. ಆದರೆ ಪ್ರತ್ಯಯಗಳನ್ನೇ ನಿಟ್ಟಿಸಿನೋಡುವ ಅಭ್ಯಾಸಮಾಡಿದರೆ ಮನಸ್ಸು ಶಾಂತವಾಗಿ ಏನೂ ವೃತ್ತಿಗಳಿಲ್ಲದ್ದಾಗುವದು. ಈ ದ್ವೈತರಹಿತವಾದ ಸ್ಥಿತಿಯಲ್ಲಿ ಯಾವದು ನೇರಾಗಿ ಅನುಭವಕ್ಕೆ ಬರುವದೋ ಅದೇ ಆತ್ಮನು, ಅಂದರೆ ನನ್ನಲ್ಲಿ ಯಾವ ವೃತ್ತಿಗಳೂ ಏಳಲಿಲ್ಲ, ಮರೆಯಾಗಲೂ ಇಲ್ಲ; ನಾನೇ ನಾನಾಗಿದ್ದೇನೆ- ಎಂದು ಅನುಭವಿಸುವೆವಷ್ಟೆ ! ಅದೇ ಸಾಕು. ಆ ಕೇವಲಸ್ಥಿತಿಯನ್ನು ಸ್ವಲ್ಪಸ್ವಲ್ಪವಾಗಿ ಅಳವಡಿಸಿಕೊಳ್ಳುತ್ತಾ ಬಂದರೆ ಅದು ಬೆಳೆದಂತೆಲ್ಲ ವ್ಯವಹಾರದಲ್ಲಿ ಬದಲಾವಣೆಯಾಗುವದು. ಕೊನೆಗೆ ನಮ್ಮ ಮನಸ್ಸು ಎಷ್ಟೇ ಅಳ್ಳಾಡಿದರೂ, ರಾಗದ್ವೇಷಗಳನ್ನು ಹೊಂದಿ ಪರಿಣಾಮವಾದರೂ ಅದು ನಾನಲ್ಲ - ಎಂಬ ನಿಶ್ಚಯವುಂಟಾಗುವದು. ಇದೇ **ಸ್ಥಿತಪ್ರಜ್ಞತ್ವ.** ಭಗವದನುಗ್ರಹದಿಂದ ಇಂಥ ಬ್ರಾಹ್ಮೀಸ್ಥಿತಿಯು ಪ್ರಾಪ್ತವಾದರೆ ನಾವು ಕೃತಕೃತ್ಯರಾದಂತೆಯೇ ಸರಿ.

೨೩. ಈಗ ಪ್ರಕೃತವಿಚಾರಕ್ಕೆ ಬರೋಣ. ಇಂಥ ಬ್ರಹ್ಮತತ್ತ್ವವು ಸರ್ವಭೂತಗಳಲ್ಲಿಯೂ ಏಕವಾಗಿರುವದರಿಂದ ಎಲ್ಲೆಲ್ಲೂ ಇರುವದು. ಇದನ್ನು ತಿಳಿಯಲು ನಿಜವಾಗಿ ಕಷ್ಟವೇನೂ ಇಲ್ಲ. **''ಸುಸುಖಂ''** ಎಂದೇ ಭಗವಂತನು ಹೇಳಿದ್ದಾನೆ. ಆದ್ದರಿಂದ ಇದನ್ನು ಅರಿಯುವ ಅವಕಾಶವು ಈ ಮನುಷ್ಯಜನ್ಮದಲ್ಲಿ ಮಾತ್ರವೇ ದೊರಕಿರುತ್ತದೆ. ಬೇರೆ ಮೂಕಪ್ರಾಣಿಗಳ ಜನ್ಮವಾಗಲಿ ದೇವಾದಿಜನ್ಮಗಳಾಗಲಿ- ಈ ಮನುಷ್ಯಜನ್ಮದಷ್ಟು ಸೌಕರ್ಯವಾಗಿದ್ದು ಆತ್ಮತತ್ತ್ವವನ್ನು ವಿಚಾರಮಾಡಲು ಅನುಕೂಲಕರವಾಗಿರುವದಿಲ್ಲ. ಏಕೆಂದರೆ ದೇವಾದಿಜನ್ಮಗಳು, ಸುಖಭೋಗಸ್ಥಾನಗಳು. ಭೋಗಲಾಲಸರಾಗಿರುವ ದೇವತೆಗಳಿಗೆ ಇಂದ್ರಿಯನಿಗ್ರಹ, ತಪಸ್ಸು- ಮುಂತಾದವು ದುಸ್ಸಾಧ್ಯವೇ ಸರಿ. ಮನುಷ್ಯರಿಗಿಂತ ದೇವತೆಗಳು ಹೆಚ್ಚಿನವರು- ಎಂಬುದು ನಿಜವಾದರೂ ಅವರಿಗೂ ಶೋಕಮೋಹಭಯಾದಿಗಳಿದ್ದೇ ಇರುತ್ತವೆ. ಅವರೂ ಸಂಸಾರಸಮುದ್ರದಲ್ಲೇ ಬಿದ್ದಿರುತ್ತಾರೆ. ಆದ್ದರಿಂದ ಬ್ರಹ್ಮಜ್ಞಾನಸಂಪಾದನೆಗೆ ದೇವತಾಜನ್ಮದಲ್ಲಿ ಪ್ರಯತ್ನಮಾಡುವದಕ್ಕಿಂತ ಈ ಮನುಷ್ಯಜನ್ಮವೇ ಮೇಲು- ಎಂದರ್ಥ. ಮನುಷ್ಯರಿಗಿಂತ ಕೀಳಾದ

ಪ್ರಾಣಿಗಳ ಜನ್ಮವಂತೂ ದುಃಖಭೋಗಸ್ಥಾನಗಳಾದ್ದರಿಂದ ಅಲ್ಲಿ ಏನೂ ಸಾಧನೆಯು ಆಗಲಾರದೆಂಬುದು ಸ್ಪಷ್ಟವೇ ಆಗಿದೆ. ಆದ್ದರಿಂದ ಇಲ್ಲಿ ತಿಳಿದರೇ ಸಾರ್ಥಕ್ಯವುಂಟು. "**ಏತದ್ಧಿ ಜನ್ಮಸಾಫಲ್ಯಂ**" ಎಂದಂತೆ ಮನುಷ್ಯ ಜನ್ಮವು ಬಂದದ್ದಕ್ಕೆ ಸಫಲವಾಯಿತು. ಮತ್ತೆ ಜನ್ಮಜರಾಮೃತ್ಯುರೂಪವಾದ ಸಂಸಾರದಲ್ಲಿ ಬೀಳಬೇಕಾಗಿರುವದಿಲ್ಲ. ಹಾಗೆ ತಿಳಿಯದೆ ಇದ್ದರೆ '**ಮಹತೀ ವಿನಷ್ಟಿಃ**' ಎಂದರೆ ಭಾರಿಯ ನಷ್ಟವೇ ಆಯಿತು ಎಂದರ್ಥ. ಆತ್ಮನನ್ನರಿಯದೆ ನಾವೇ ಆತ್ಮಹತ್ಯೆಯನ್ನು ಮಾಡಿಕೊಂಡವರಾಗುತ್ತೇವೆ. ಆದ್ದರಿಂದ ಜ್ಞಾಣರು ಎಂದಿಗೂ ಹೀಗೆ ಮಾಡದೆ ಸರ್ವಭೂತಗಳಲ್ಲಿಯೂ ಅಡಗಿರುವ ಈ ಬ್ರಹ್ಮವನ್ನು ಹುಡುಕಿ ಅರಿತುಕೊಂಡು ಕೃತಕೃತ್ಯರಾಗಿ ಬ್ರಹ್ಮವನ್ನು ತಿಳಿದು ಬ್ರಹ್ಮವೇ ಆಗುವರು, ಅಮೃತರಾಗುವರು- ಎಂದು ಈ ಜ್ಞಾನಕ್ಕೆ ಶ್ರುತಿಯು ಫಲಸಂಕೀರ್ತನೆಯನ್ನೂ ಮಾಡಿದೆ. ಇಂಥ ಜ್ಞಾನವನ್ನು ಸಂಪಾದಿಸಲು ನಾವುಗಳೆಲ್ಲರೂ ಪ್ರಯತ್ನಿಸಬೇಕೆಂದು ಮತ್ತೆ ಹೇಳಬೇಕಾಗಿಲ್ಲವಷ್ಟೆ!

---------

## ೪. ಯಕ್ಷೋಪಾಖ್ಯಾನ

೨೪. ಬ್ರಹ್ಮವಿದ್ಯಾಸ್ತುತಿರೂಪವಾದ ಒಂದು ಕಥೆಯನ್ನು ಈಗ ಶ್ರುತಿಯು ಹೇಳುತ್ತಿದೆ. ಬ್ರಹ್ಮವು ನಿರ್ವಿಶೇಷವೂ ಅದ್ವಿತೀಯವೂ ನಾಮ ರೂಪಾದಿಗಳಿಲ್ಲದ್ದೂ ಆಗಿದೆ- ಎಂದು ಈವರೆಗೆ ಪ್ರತಿಪಾದಿಸಿದ್ದರಿಂದ ಮಂದಬುದ್ಧಿಯವರಿಗೆ ಬ್ರಹ್ಮವು ಇಲ್ಲವೇ ಇಲ್ಲ ಎಂಬ ಭ್ರಾಂತಿಯಾಗ ಬಹುದು. ಏಕೆಂದರೆ ಏನೂ ವಿಶೇಷಗಳಿಲ್ಲದಿದ್ದರೆ ಅದು ಮೊಲದಕೊಂಬಿ ನಂತೆ ಶೂನ್ಯವೇ ಆಗಿರಬೇಕಲ್ಲವೆ ?- ಎಂದು ಅವರ ವಾದ. ಇಂಥ ಮೂಢರನ್ನು ಎಚ್ಚರಗೊಳಿಸುವದಕ್ಕಾಗಿ- ಸರ್ವವ್ಯಾಪಿಯಾಗಿದ್ದರೂ ಭಗವಂತನು ಪ್ರಹ್ಲಾದನ ಮಾತನ್ನು ನಿಜಮಾಡಲು ಕಂಬದಿಂದ ಬಂದಂತೆ - ಬ್ರಹ್ಮವು ಯಕ್ಷರೂಪದಿಂದ ತೋರಿಕೊಂಡ ಕಥೆಯನ್ನು ಹೇಳುತ್ತಾರೆ.

೨೫. ಒಂದು ಸಂದರ್ಭದಲ್ಲಿ ದೇವದಾನವರಿಗೆ ನಡೆದ ಯುದ್ಧದಲ್ಲಿ ದೇವತೆಗಳಿಗೆ ಬ್ರಹ್ಮದ ಬಲದಿದ ಜಯವಾಯಿತು. ಆದರೆ ದೇವತೆಗಳು ಆ ವಿಜಯವು ತಮ್ಮದೇ ಎಂದು ಅಹಂಕಾರಪಟ್ಟುಕೊಂಡರು. ಆಗ ಬ್ರಹ್ಮವು ದೇವತೆಗಳು ಹೀಗೆ ಅಹಂಕಾರದಿಂದ ನಷ್ಟರಾಗುವರಲ್ಲ! ಇವರನ್ನು ಕಾಪಾಡಬೇಕು- ಎಂದು ಯೋಚಿಸಿ ಒಂದಾನೊಂದು ಯಕ್ಷ ರೂಪದಿಂದ ತೋರಿಕೊಂಡಿತು. ಯಕ್ಷರೂಪವೆಂದರೆ ಭಯಂಕರವಾದ ಒಂದು ದೊಡ್ಡ ಆಕಾರ. ಅದನ್ನು ನೋಡಿದಾಗ ದೇವತೆಗಳಿಗೆ 'ಈ ಯಕ್ಷನು ಯಾರು' ? ಎಂಬುದು ತಿಳಿಯಲಿಲ್ಲ. ಆಗ ತಮ್ಮಲ್ಲಿ ಜಾಣನಾದ ಅಗ್ನಿ ದೇವನನ್ನು "ನೀನು ಹೋಗಿ ಆ ಯಕ್ಷನ ವೃತ್ತಾಂತವನ್ನು ತಿಳಿದು ಬಾ" ಎಂದು ಕಳುಹಿಸಿದರು. ಅಗ್ನಿಯು ಬರಲಾಗಿ ಯಕ್ಷನು 'ನೀನು ಯಾರು' ? ಎಂದು ಕೇಳಿತು. ಅದಕ್ಕೆ ಅಗ್ನಿಯು "ನಾನು ಜಾತವೇದನು ; ಈ ಜಗತ್ತೆಲ್ಲವನ್ನೂ ಸುಟ್ಟು ಬೂದಿಮಾಡುವ ಶಕ್ತಿಯುಳ್ಳ ಅಗ್ನಿಯು" ಎಂದು ಜಂಭಕೊಚ್ಚಿದನು. ಹಾಗಾದರೆ "ಈ ಹುಲ್ಲುಕಡ್ಡಿಯನ್ನು ಸುಡು" ಎಂದು ಯಕ್ಷನು ಹೇಳಿತು. ಅಗ್ನಿಯು ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ ಎಷ್ಟೇ ಉರಿದುಬಿದ್ದರೂ ಆ ಹುಲ್ಲನ್ನು ಸುಡಲಾಗಲಿಲ್ಲ. ಅವನು ನಾಚಿಕೆಯಿಂದ ಹಿಂದಿರುಗಿದನು. ಅನಂತರ ದೇವತೆಗಳು ಬಲಿಷ್ಠನಾದ ವಾಯುದೇವನನ್ನು ಕಳುಹಿಸಿದರು. 'ನೀನು ಯಾರು ?' ಎಂದು ಅವನನ್ನೂ ಯಕ್ಷನು ಕೇಳಲಾಗಿ 'ನಾನು ವಾಯುದೇವ, ಯಾವ ವಸ್ತುವನ್ನಾದರೂ ಹಾರಿಸಿಬಿಡಬಲ್ಲೆನು'- ಎಂದಾಗ ಹಿಂದಿನಂತೆಯೇ ಹುಲ್ಲುಕಡ್ಡಿಯನ್ನು ಹಾರಿಸುವಂತೆ ಯಕ್ಷನು ಹೇಳಿತು. ವಾಯುವು ತನ್ನ ಬಲವನ್ನೆಲ್ಲ ಉಪಯೋಗಿಸಿ ಬೀಸಿದರೂ ಕಡ್ಡಿಯನ್ನು ಅಲ್ಲಾಡಿಸಲಾಗಲಿಲ್ಲ. ಆತನಿಗೂ ಅಪಮಾನವಾಯಿತು. ಕೊನೆಗೆ ದೇವೇಂದ್ರನೇ ಈ ಯಕ್ಷನ ಸ್ವರೂಪವನ್ನು ತಿಳಿಯಲು ಬಂದನು. ಆದರೆ ಯಕ್ಷನು ಅವನಿಗೆ ದರ್ಶನವನ್ನೂಕೊಡದೆ ಅಂತರ್ಧಾನ(ಮರೆ)ವಾಯಿತು. ಆಗ ಇಂದ್ರನು ಇದೇನಿರಬಹುದೆಂದು ಯೋಚಿಸುತ್ತಾ ಅಲ್ಲಿಯೇ ನಿಲ್ಲಲಾಗಿ ಸ್ತ್ರೀರೂಪಳಾಗಿ ಹೈಮವತೀ ಉಮಾದೇವಿಯು ತೋರಿಕೊಂಡು ಇಂದ್ರನಿಗೆ

ಯಕ್ಷತತ್ತ್ವವನ್ನು ತಿಳಿಸಿದಳು. ''ಎಲೈ ದೇವತೆಗಳಿರಾ, ನಿಮ್ಮ ಯೋಗ್ಯತೆ ತಿಳಿಯಿತೆ ? ಬ್ರಹ್ಮವೇ ವಿಜಯವನ್ನು ಸಂಪಾದಿಸಿದ್ದು. ನೀವು ನಮ್ಮದೇ ವಿಜಯವೆಂದು ಹೆಮ್ಮೆಪಟ್ಟಿರಿ. ಆದರೆ ಬ್ರಹ್ಮದ ಶಕ್ತಿಯಿಲ್ಲದೆ ನೀವು ಒಂದು ಕಡ್ಡಿಯನ್ನೂ ಅಳ್ಳಾಡಿಸಲಾರಿರಿ' ಎಂದು ಹೇಳಿದಾಗ ಇಂದ್ರನಿಗೆ ಜ್ಞಾನೋದಯವಾಯಿತು. ಹೀಗೆ ಇಂದ್ರನು ದೇವತೆಗಳಲ್ಲಿ ಮೊಟ್ಟಮೊದಲು ಬ್ರಹ್ಮವನ್ನು ಅರಿತನಾದ್ದರಿಂದ ಉಳಿದೆಲ್ಲ ದೇವತೆಗಳಿಗಿಂತಲೂ ಮಿಗಿಲಾದನು.

೨೬. ಈ ಕಥೆಯ ಮೂಲಕ ಬ್ರಹ್ಮವಿದ್ಯೆಯನ್ನು ಇಲ್ಲಿ ಸ್ತುತಿಸಿದ್ದಾರೆ. ದೇವೇಂದ್ರನಂಥ ದೇವತೆಗಳು ಕೂಡ ಮೊದಲಿಗೆ ಬ್ರಹ್ಮವನ್ನು ಅರಿಯದೆ ಮೋಸಹೋದರು- ಎಂದಮೇಲೆ ಸಾಮಾನ್ಯರ ಪಾಡೇನು ? ಆದ್ದರಿಂದ ಅಹಂಕಾರರಹಿತರಾಗಿ ವಿನೀತರಾಗಿ ಶ್ರದ್ಧೆಯಿಂದ ಬಲ್ಲವರಲ್ಲಿ ವಿಚಾರಮಾಡಿ ತತ್ತ್ವವನ್ನು ತಿಳಿಯಬೇಕು ಎಂದರ್ಥ. ಅಮಾನಿತ್ವಾದಿಸಾಧನಗಳನ್ನು ಈ ಉದ್ದೇಶದಿಂದಲೇ ಗೀತೆಯಲ್ಲಿ ಹೇಳಿದೆ. ಯಾವನಿಗೆ ಇಂಥ ಜ್ಞಾನಸಾಧನಗಳು ಅಳವಟ್ಟಿರುವದಿಲ್ಲವೋ ಅಂಥವನಿಗೆ ಬ್ರಹ್ಮವನ್ನು ತಿಳಿಯುವ ಯೋಗ್ಯತೆಯು ಬರಲಾರದು- ಎಂದು ಸಿದ್ಧವಾಯಿತು.

೨೭. ಈಗ ಇದುವರೆಗೆ ಆಗಮದಿಂದ ಉಪದೇಶಮಾಡಿದ ನಿರ್ವಿಶೇಷತತ್ತ್ವವನ್ನೇ ಮಧ್ಯಮಾಧಿಕಾರಿಗಳಾದವರು ಉಪಾಸನೆ ಮಾಡಲೆಂಬ ಉದ್ದೇಶದಿಂದ ಒಂದೆರಡು ಹೋಲಿಕೆಗಳನ್ನು ಹೇಳಿ ಬ್ರಹ್ಮವನ್ನು ತಿಳಿಸುತ್ತಾರೆ. ಅಧಿದೈವತವಾಗಿ ಮಿಂಚನ್ನು ಹೋಲಿಕೆಗೆ ಕೊಟ್ಟಿದ್ದಾರೆ. ಮಿಂಚು- ಎಂಬುದು ಹೇಗೆ ಯಾವ ವಿಶೇಷರೂಪವೂ ಇಲ್ಲದಿದ್ದರೂ ಥಳಾರನೆ ಹೊಳೆದು ಕ್ಷಣ ಮಾತ್ರದಲ್ಲಿ ಕಣ್ಮರೆಯಾಗುವದೋ ಅದು ಕೆಲವು ಸಲ ಬಳ್ಳಿಬಳ್ಳಿಯಾಗಿ ತೋರುವದೋ- ಹೇಗೆ ತೋರಿದರೂ ಅದು ಕೇವಲ ಬೆಳಕು ಮತ್ತು ಶಕ್ತಿಮಾತ್ರವೋ - ಹಾಗೆ ಬ್ರಹ್ಮವೂ ನಿರ್ವಿಶೇಷವಾಗಿದ್ದು ಎಲ್ಲಾ ಪ್ರಾಣಿಗಳ ಶರೀರೋಪಾಧಿಗಳ ಮೂಲಕವಾಗಿ ಹೊಳೆಯುತ್ತದೆ. ಇದನ್ನು ಮಿಂಚಿನ ಬೆಳಕಿನಂತೆ ಇದೆಯೆಂದೂ

ಸಾಮಾನ್ಯರೂ ಚಿಂತಿಸಬಹುದು. ಇದೇ ಅಧಿದೈವತೋಪಾಸನೆ. ಇನ್ನು ಅಧ್ಯಾತ್ಮವಾಗಿ ನೋಡಿದರೆ ಮನಸ್ಸು ಎಲ್ಲಾ ಇಂದ್ರಿಯಗಳಿಗಿಂತಲೂ ಸೂಕ್ಷ್ಮವಾದದ್ದು. ಕ್ಷಣಮಾತ್ರದಲ್ಲಿ ಲೋಕಾಂತರಗಳಿಗೆ ಹೋಗಬಲ್ಲದು. ಹಾಗೆ ಮನಸ್ಸಿನಂತೆ ಬ್ರಹ್ಮವು ಎಲ್ಲಾ ವಸ್ತುಗಳನ್ನೂ ಅಭಿವ್ಯಕ್ತಿಗೊಳಿಸುವ ಗುಣವುಳ್ಳದ್ದು. ಬಹಳ ವೇಗವುಳ್ಳದ್ದು ಎಂದು ಚಿಂತಿಸಬೇಕು. ಇವು ಸಾಮಾನ್ಯರ ದೃಷ್ಟಿಯಿಂದ ಹೇಳಿದವುಗಳಾದರೂ ಈ ಎರಡು ಉಪಾಸನೆಗಳೂ ನಮ್ಮ ದೃಷ್ಟಿಯಿಂದ ದೊಡ್ಡವೇ ಆಗಿವೆ. ಇನ್ನು ಬ್ರಹ್ಮವನ್ನು **'ತದ್ವನ'** ಎಂಬ ಹೆಸರಿನಿಂದಲೂ ಚಿಂತಿಸಬೇಕು. ತದ್ವನ ಎಂದರೆ ಎಲ್ಲಾ ಪ್ರಾಣಿಗಳ ಸಮೂಹಕ್ಕೂ ಅಂತರಾತ್ಮನಾಗಿದ್ದು 'ವನನೀಯ' ಸಂಭಜನೀಯವಾಗಿದೆ- ಎಲ್ಲರೂ ಸೇವಿಸತಕ್ಕದ್ದಾಗಿದೆ- ಎಂದು ಅರ್ಥ. ಬ್ರಹ್ಮವು ಎಲ್ಲರಿಗೂ ಆತ್ಮನಾಗಿರುವದರಿಂದ ಪ್ರಿಯವಾಗಿರುತ್ತದೆ. ಯಾವದರಲ್ಲಿ ಪ್ರೀತಿಯಿರುತ್ತದೆಯೋ ಅದನ್ನು ಬಯಸುವದು ಮನುಷ್ಯನ ಸ್ವಭಾವ. ಹಾಗೆಯೇ ಬ್ರಹ್ಮವೂ ಎಲ್ಲರಿಗೂ ಬೇಕಾದದ್ದು. ಅದನ್ನೇ 'ವನನೀಯಂ' ಎಂದು ಇಲ್ಲಿ ಹೇಳಿದೆ. ತಿಳಿದು ಪ್ರೀತಿಮಾಡಿದರಂತೂ ಸರಿಯೆ. ಒಂದುವೇಳೆ ಬ್ರಹ್ಮದ ಸ್ವರೂಪವನ್ನರಿಯದೆ ಶಾಸ್ತ್ರದಲ್ಲಿ ಹೇಳಿರುವಂತೆ ಮತ್ತು ಗುರುಗಳು ಉಪದೇಶಿಸಿದಂತೆ ಶ್ರದ್ಧೆಯಿಟ್ಟು ಚಿಂತಿಸಿದರೂ ಫಲವುಂಟು. ಅದೇ ಬ್ರಹ್ಮದ ಉಪಾಸನೆಯಾಯಿತು. ಇಲ್ಲಿಗೆ ಉಪಾಸನಾ ಸಹಿತವಾದ ಬ್ರಹ್ಮವಿದ್ಯೋಪದೇಶವು ಮುಗಿಯಿತು.

--------

## ೫. ಬ್ರಹ್ಮವಿದ್ಯಾಸಾಧನಗಳು

೨೮. ಈಗ ಪುನಃ ಶ್ರುತಿಯು ಆಚಾರ್ಯಶಿಷ್ಯಸಂವಾದರೂಪವನ್ನು ಆಶ್ರಯಿಸಿ ಬ್ರಹ್ಮವಿದ್ಯೆಗೆ ಕೆಲವು ಸಾಧನಗಳನ್ನು ತಿಳಿಸುತ್ತಿದೆ. ಉಪದೇಶವೆಲ್ಲವೂ ಪೂರೈಸಿದ ಅನಂತರ ಶಿಷ್ಯನು ''ಪೂಜ್ಯರೆ, ಉಪನಿಷತ್ತನ್ನು ಹೇಳಿರಿ'' ಎಂದು ಕೇಳಲಾಗಿ ಆಚಾರ್ಯರು ''ಅಯ್ಯ,

ನಿನಗೆ ಬ್ರಾಹ್ಮಉಪನಿಷತ್ತನ್ನು ಹೇಳಿ ಆಯಿತು. ಆ ಬ್ರಹ್ಮವಿದ್ಯೆಗೆ ತಪಸ್ಸು ದಮ, ಶಮ- ಇವುಗಳೇ ಅಲ್ಲದೆ ವೇದಗಳು, ವೇದಾಂಗಗಳು ಎಲ್ಲವೂ ಆಧಾರಗಳು ; ಸತ್ಯವೇ ಪರಮಸ್ಥಾನವು'' ಎಂದು ಉಪದೇಶಿಸಿದ್ದಾರೆ. ಇಲ್ಲಿ ಶಿಷ್ಯನು ಪುನಃ ಉಪನಿಷತ್ತನ್ನು ಹೇಳಿರಿ- ಎಂದು ಕೇಳಿರುವದರ ಉದ್ದೇಶವೇನೆಂದರೆ : ಬ್ರಹ್ಮವಿದ್ಯೆಯೆಂಬುದು ಸ್ವತಂತ್ರವಾಗಿ ತಾನೊಂದೇ ಮೋಕ್ಷವನ್ನುಂಟುಮಾಡಬಲ್ಲದೊ ? ಅಥವಾ ಮತ್ತೇನಾದರೂ ಸಹಕಾರಿ ಸಾಧನಗಳ ಅವಶ್ಯಕತೆಯುಂಟೊ ? ಎಂಬುದೇ ಆಗಿದೆ. ಆಚಾರ್ಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿ ಉಪನಿಷತ್ತನ್ನು ಹೇಳಿ ಆಗಿದೆ- ಎಂದು ಮಾತ್ರ ಹೇಳಿ ಮುಂದೆ ಸಾಧನಗಳನ್ನು ಹೇಳಿದ್ದಾರೆ. ಇದರ ತಾತ್ಪರ್ಯ ವೇನೆಂದರೆ : ಬ್ರಹ್ಮವಿದ್ಯೆಯ ಜೊತೆಗೆ ಮೋಕ್ಷಕ್ಕೆ ಸಹಕಾರಿಸಾಧನಗಳೆಂಬಿವು ಯಾವವೂ ಇಲ್ಲ. ವಿದ್ಯೆಯೊಂದೇ ನೇರಾಗಿ ಸ್ವತಂತ್ರವಾಗಿ ಮೋಕ್ಷಸಾಧನ. ಆದರೆ ಆ ಬ್ರಹ್ಮವಿದ್ಯೆಯನ್ನು ಪಡೆಯಲು ತಪಸ್ಸೇ ಮೊದಲಾದ ಸಾಧನಗಳ ಅವಶ್ಯಕತೆಯಿದೆ- ಎಂದು ಅರ್ಥ. ಅವುಗಳು ಯಾವವೆಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದ್ದಾರೆ.

೨೯. ಈಗ ಬ್ರಹ್ಮವಿದ್ಯಾಸಾಧನಗಳನ್ನು ಸೌಕರ್ಯಕ್ಕಾಗಿ ಮೂರು ವಿಭಾಗವಾಗಿ ಮಾಡಿಕೊಳ್ಳಬಹುದು. ಅವು ಯಾವವೆಂದರೆ : (೧) ಬಹಿರಂಗಸಾಧನಗಳು (೨) ಅಂತರಂಗಸಾದನಗಳು (೩) ಸಾಕ್ಷಾತ್ (ನೇರಾದ) ಸಾಧನಗಳು - ಹೀಗೆ ಮೂರು ವಿಭಾಗವಾಗಿವೆ. ಇವುಗಳ ಬಗ್ಗೆ ಸ್ವಲ್ಪ ವಿಚಾರಮಾಡೋಣ.

೩೦. **ಬಹಿರಂಗಸಾಧನ**ಗಳೆಂದರೆ ಶರೀರಪ್ರಧಾನವಾದವುಗಳು. ಆದರೆ ಈ ಸಾಧನಗಳಲ್ಲಿಯೂ ಶರೀರವಾಕ್ಕುಗಳ ಜೊತೆಗೆ ಮನಸ್ಸಿನ ಸಹಾಯವೂ ಇದ್ದೇ ಇದೆ. ಇಂಥ ಸಾಧನಗಳಲ್ಲಿ ಮುಖ್ಯವಾದವು ಯಜ್ಞದಾನತಪಸ್ಸುಗಳು. ಇವು ಮೂರನ್ನೂ ಬೃಹದಾರಣ್ಯಕೋಪ ನಿಷತ್ತಿನಲ್ಲಿ **''ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾऽನಾಶಕೇನ''** ಎಂದು **ಹೊಗಳಿದೆ.**

ಗೀತೆಯಲ್ಲಿಯೂ **"ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್"** ಎಂದು ಪರಾಮರ್ಶಿಸಿದೆ. ಆದರೆ ಕಲಿಯುಗದಲ್ಲಿ ಎಲ್ಲವೂ ದುರ್ಲಭವೇ ಆಗಿವೆ. ಯಜ್ಞವೆಂದರೆ ಶ್ರೌತಸ್ಮಾರ್ತಯಜ್ಞಗಳೆಲ್ಲ ಸೇರುತ್ತವೆ. ವೇದಾಧ್ಯಯನವೇ ಲೋಪವಾಗುತ್ತಿರುವ ಈ ಕಾಲದಲ್ಲಿ ಯಜ್ಞಮಾಡುವವರೂ ಮಾಡಿಸುವವರೂ ವಿರಳರೆನ್ನಬೇಕು, ಇನ್ನು ಸಣ್ಣ ಪುಟ್ಟ ಸ್ಮಾರ್ತಯಜ್ಞಗಳು- ಪಿತೃಶ್ರಾದ್ಧ ಇಂಥವುಗಳನ್ನು ಕೂಡ ಈಗ ಸರಿಯಾಗಿಮಾಡುವದು ದುರ್ಲಭವಾಗಿದೆ. ಉಪನಯನ- ವಿವಾಹಾದಿ ಮುಖ್ಯ ಸಂಸ್ಕಾರಗಳೇ ಲೋಪವಾಗುತ್ತಿವೆ. ವರ್ಣಾಶ್ರಮಧರ್ಮಗಳೆಲ್ಲವೂ ಕುಸಿದುಬಿದ್ದಿವೆ. ಹೀಗಿರುವಾಗ ಇಂಥ ಶ್ರೌತಸ್ಮಾರ್ತಯಜ್ಞಗಳನ್ನು ಭಗವತ್ ಪ್ರೀತಿಗಾಗಿಯೇ ಮಾಡಿ ಫಲತ್ಯಾಗಮಾಡುವಂಥ ಮಹನೀಯರು ಎಷ್ಟು ಜನರಿರಬಹುದು ? ಸಾಮಾನ್ಯರಿಗಂತೂ ಈ ಸಾಧನಗಳು ಕಷ್ಟಸಾಧ್ಯವೇ ಸರಿ. ಆದ್ದರಿಂದಲೇ ಋಷಿಗಳು "ಕಲಿಯುಗದಲ್ಲಿ ಕಲ್ಮಷಚಿತ್ತರಾದ, ಪಾಪ ದ್ರವ್ಯಗಳಿಂದ ಜೀವನಮಾಡುತ್ತಿರುವ ವಿಧಿಕ್ರಿಯಾವಿಹೀನರಾದವರಿಗೆ ಗೋವಿಂದಕೀರ್ತನವೇ ಗತಿ' ಎಂದು ಹೇಳಿದ್ದಾರೆ. ಆದ್ದರಿಂದ ಬ್ರಹ್ಮವಿದ್ಯೆಗೆ ಅವಶ್ಯವಾದ ಬಹಿರಂಗಸಾಧನಗಳನ್ನು ಕೂಡ ಅನುಷ್ಠಾನಮಾಡುವ ಯೋಗ್ಯತೆಯಿಲ್ಲದ ಸಾಮಾನ್ಯರಿಗೆ ಇನ್ನು ಮೋಕ್ಷಪ್ರಾಪ್ತಿಯಾದರೂ ಎಷ್ಟುದೂರವಿರುವದೆಂಬುದನ್ನು ಊಹಿಸಬಹುದು. ಆದ್ದರಿಂದ ಈಗಿನಿಂದಲೂ ಜ್ಞಾನಸಂಪಾದನೆಯನ್ನೂ ಆ ಮೂಲಕ ಮೋಕ್ಷಪ್ರಾಪ್ತಿ ಯನ್ನೂ ಗುರಿಯಾಗಿಟ್ಟುಕೊಂಡು ಸತ್ಕರ್ಮಸದಾಚಾರನಿರತರಾಗಿ ಧರ್ಮ ಮಾರ್ಗದಲ್ಲಿ ನಡೆಯುತ್ತಿದ್ದರೆ ಅನೇಕ ಜನ್ಮಗಳಲ್ಲಿ ಮಾಡಿದ ಈ ಸಾಧನ ಸಂಸ್ಕಾರಗಳ ಬಲದಿಂದ ಪರಮಪುರುಷಾರ್ಥವನ್ನು ಕಾಲಕ್ರಮದಲ್ಲಿ ಹೊಂದಬಹುದಾಗಿದೆ.

೩೧. ಇನ್ನು **ಅಂತರಂಗಸಾಧನ**ಗಳೆಂದರೆ ಶಾಂತಿ, ದಾಂತಿ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ- ಇವುಗಳು. ಇವುಗಳನ್ನು **"ಶಾನ್ತೋ ದಾನ್ತ ಉಪರತಸ್ತಿತಿಕ್ಷುಃ ಸಮಾಹಿತಃ ಶ್ರದ್ಧಾವಿತ್ತೋ ಭೂತ್ವಾ"** ಎಂಬಲ್ಲಿ

ಉಪನಿಷತ್ತಿನಲ್ಲಿ ಹೇಳಿದೆ. ಇವುಗಳನ್ನು ಮಾಡಬೇಕಾದರೆ ಏಕಾಕಿಯಾಗಿ ತಾನೇ ತನ್ನೊಳಗೇ ಮಾಡತಕ್ಕದ್ದು; ಯಾರ ಸಹಾಯವೂ ಬೇಕಿಲ್ಲ. ಇವು ದಕ್ಕಬೇಕಾದರೆ ಬಹಿರಂಗವಾದ ಕರ್ಮಯೋಗದಿಂದ ಉಂಟಾದ ಚಿತ್ತಶುದ್ಧಿಯು ಅಳವಟ್ಟಿರಬೇಕು. ಹಾಗಾದರೆಮಾತ್ರವೇ ಇವುಗಳನ್ನು ಮಾಡಲು ಸಾಧ್ಯ. ಇವುಗಳ ವಿವರವನ್ನು ಉಪನಿಷತ್ತುಗಳ ಶಂಕರಭಾಷ್ಯ ದಿಂದ ತಿಳಿಯಬೇಕು. ಪ್ರಕೃತದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗುವದು. **ಶಾಂತಿ** ಎಂದರೆ ಬಾಹ್ಯವಾದ ಇಂದ್ರಿಯಗಳ ಚಾಪಲ್ಯದಿಂದ ಹಿಂತಿರುಗುವದು- ಎಂದರೆ ಚಾಂಚಲ್ಯನ್ನು ಬಿಡುವದು. **ದಾಂತಿ** ಎಂದರೆ ಅಂತಃಕರಣವನ್ನು ಆಶ್ರಯಿಸಿಕೊಂಡಿರುವ ಆಶೆ, ಕಾಮ, ಕ್ರೋಧ- ಇವುಗಳನ್ನು ತೆಗೆದು ಹಾಕುವದು; **ಉಪರತಿ** ಎಂದರೆ ವೈರಾಗ್ಯವು. ಇಹಲೋಕಪರಲೋಕದ ಎಲ್ಲಾ ಸುಖಗಳಿಂದಲೂ ವಿಮುಖನಾಗುವದು. **ತಿತಿಕ್ಷೆ** ಎಂದರೆ ಶೀತ, ಉಷ್ಣ ಸುಖದುಃಖ- ಮುಂತಾದ ದ್ವಂದ್ವಗಳನ್ನು ಸಹಿಸಿಕೊಳ್ಳುವದು. **ಸಮಾಧಾನ** ಎಂದರೆ ಹೊರಗಿನ ಮತ್ತು ಒಳಗಿನ ಇಂದ್ರಿಯಚಾಪಲ್ಯಗಳಿಂದ ಹಿಂತಿರುಗಿ ಅಂತಃಕರಣವನ್ನು ಸ್ಥಿರಗೊಳಿಸಿ ಏಕಾಗ್ರವಾಗಿ ಮಾಡಿಕೊಳ್ಳುವದು. **ಶ್ರದ್ಧೆ** ಎಂದರೆ ಗುರುವಾಕ್ಯದಲ್ಲಿಯೂ ಶಾಸ್ತ್ರದಲ್ಲಿಯೂ ತಾನು ಮಾಡುತ್ತಿರುವ ಸಾಧನಗಳಲ್ಲಿಯೂ ನಂಬಿಕೆ. ತಾನು ಖಂಡಿತವಾಗಿ ತತ್ತ್ವವನ್ನು ಮುಟ್ಟಿಯೇ ತೀರುವೆನೆಂಬ ವಿಶ್ವಾಸ. ಹೀಗೆ ಈ ಅಂತರಂಗಸಾಧನಗಳನ್ನು ಎರಡನೆಯ ಮೆಟ್ಟಿಲಾಗಿ ಅನುಷ್ಠಾನಮಾಡಬೇಕು.

೩೨. ಇನ್ನು ಸಾಕ್ಷಾತ್‌ಸಾಧನಗಳೆಂದರೆ ಶ್ರವಣಮನನ ನಿದಿ- ಧ್ಯಾಸನಗಳೆಂಬಿವು. ಇವುಗಳನ್ನೂ "**ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ**" ಎಂಬಲ್ಲಿ ಹೇಳಿದೆ. ಇದು ಮೈತ್ರೇಯಿಗೆ ಯಾಜ್ಞವಲ್ಕ್ಯರು ಹೇಳಿದ ಮಾತು. ಇದರ ಅರ್ಥವನ್ನು ತಿಳಯುವದು ಅಗತ್ಯ. ಇಲ್ಲಿ '**ದ್ರಷ್ಟವ್ಯಃ**' ಎಂಬುದು ಸಾಧನವಲ್ಲ, ಇದೇ ಫಲ. '**ಶ್ರೋತವ್ಯಃ, ಮನ್ತವ್ಯಃ, ನಿದಿಧ್ಯಾಸಿತವ್ಯಃ**' ಇವುಗಳು ಆತ್ಮದರ್ಶನಕ್ಕೆ ನೇರಾದ ಸಾಧನಗಳು. '**ಶ್ರೋತವ್ಯಃ**' ಎಂದರೆ ಆತ್ಮನ ವಿಚಾರವಾಗಿ

ಶ್ರವಣಮಾಡಬೇಕು (ಕೇಳಬೇಕು) ಎಂದರ್ಥ. ಈ ಶ್ರವಣವೆಂಬುದು ಬಹು ಮುಖ್ಯಸಾಧನ. ಈ ಶ್ರವಣವನ್ನು ಆಚಾರ್ಯನಿಂದಲೇ ಆಗಮ ಸಂಪ್ರದಾಯಕ್ಕನುಗುಣವಾಗಿಯೇ ಮಾಡಬೇಕು. ಈ ವಿಚಾರವನ್ನು ಹಿಂದೆ ಹೇಳಿದೆ. ಬ್ರಹ್ಮಕ್ಕಿಂತ ಅನನ್ಯನಾದ ಆಚಾರ್ಯನು ಅಧಿಕಾರಿಯಾದ ಶಿಷ್ಯನಿಗೆ ಹೇಳಿದರೆ ಈ ತತ್ತ್ವವು ತಿಳಿಯಲಿಲ್ಲವೆಂಬುದಿಲ್ಲವೇ ಇಲ್ಲ- ಎಂಬ ಕಠೋಪನಿಷತ್ತಿನ ವಾಕ್ಯಕ್ಕೂ ಇದೇ ಅರ್ಥ. ಉತ್ತಮಾಧಿಕಾರಿಯಾದವನಿಗೆ ಶ್ರವಣಮಾತ್ರದಿಂದಲೇ ಬ್ರಹ್ಮಜ್ಞಾನವುಂಟಾಗಿಬಿಡುವದರಿಂದ ಮನನಾದಿಗಳ ಅವಶ್ಯಕತೆ ಇರುವದಿಲ್ಲ. ಆದರೆ ಅಂಥ ಅಧಿಕಾರಿಗಳ ಸಂಖ್ಯೆ ತೀರ ಕಡಿಮೆ. ಆದ್ದರಿಂದ ಶ್ರವಣಮಾತ್ರದಿಂದ ತತ್ತ್ವವು ದೃಢವಾಗಿ ನೆಲೆನಿಲ್ಲದೆ ಹೋದಾಗ ಈ ಮುಂದೆ ಹೇಳುವ ಮನನಾದಿಗಳನ್ನು ಮಾಡಬೇಕು. ಮನನಮಾಡುವದು ಎಂದರೆ ತತ್ತ್ವವನ್ನು ತನ್ನ ಮನಸ್ಸಿನಲ್ಲಿ ಚೆನ್ನಾಗಿ ಹೊರಳಾಡಿಸುವದು, ಮೆಲುಕು ಹಾಕುವದು ; ಶ್ರುತ್ಯನುಸಾರಿಯಾದ ತರ್ಕದಿಂದ ಚೆನ್ನಾಗಿ ದೃಢಪಡಿಸಿಕೊಳ್ಳಬೇಕು. ಇದನ್ನೇ ಉಪಪತ್ತಿ ಎನ್ನುವರು. ತರ್ಕವೆಂದರೆ ವಾಗ್ಜಾಲಗಳಿಂದ ಪರಮತವನ್ನು ಖಂಡನೆ ಮಾಡುವ ದುಸ್ತರ್ಕವಲ್ಲ. ಅದು ಬುದ್ಧಿಯ ಕೆಲಸ. ಬಹಿರ್ಮುಖವಾದ ಬುದ್ಧಿಯು ಇಲ್ಲಿ ಆತ್ಮನನ್ನು ತಿಳಿಯಲು ಬರುವದಿಲ್ಲ. ಆದ್ದರಿಂದ ಒಳಮುಖವಾದ (ಮನೀಷಾ- ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಿರುವ) ಸಂಸ್ಕೃತಬುದ್ಧಿಯಿಂದ- ಈಗ ಶ್ರುತವಾದ ಆತ್ಮತತ್ತ್ವವನ್ನು ಮತ್ತೆ ಮತ್ತೆ ಗಟ್ಟಿಗೊಳಿಸುವ ಪ್ರಯತ್ನವನ್ನು ಮಾಡಬೇಕು. ಇದೇ ಮನನ. ಈ ಮನನವು ದಕ್ಕಿದಮೇಲೆ ನಿದಿಧ್ಯಾಸನಮಾಡಬೇಕು. ನಿದಿಧ್ಯಾಸನವೆಂದರೆ ತರ್ಕವನ್ನೂ ಕೈಬಿಟ್ಟು ವಸ್ತುವನ್ನೇ ನಿಟ್ಟಿಸಿ ನೋಡುವದು. ಏಕಾಗ್ರತೆಯಿಂದ ಅದನ್ನು ರತ್ನಪರೀಕ್ಷಕನಂತೆ ನಿಶ್ಚಲವಾಗಿ ನೋಡುವದು- ಎಂದರ್ಥ. ಇಲ್ಲಿ ಆತ್ಮತತ್ತ್ವವು ನೋಡಲು ಬಾರದಿರುವದರಿಂದ **'ಅರ್ಥಾತ್'** ಏನನ್ನೂ ಚಿಂತಿಸದೇ ಇರುವದು. ಇದನ್ನೇ ಗೀತೆಯಲ್ಲಿ **"ಆತ್ಮಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್"** (ಆತ್ಮನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ ಏನನ್ನೂ

ಚಿಂತಿಸದಿರುವದು) ಎಂದು ಹೇಳಿದೆ. ಇದೇ ನಿಧಿಧ್ಯಾಸನವು. ಹೀಗೆ ಈ ಸಾಧನತ್ರಯಗಳು ಅಳವಟ್ಟರೆ ಕೊನೆಯಲ್ಲಿ ಸಾಧನಗಳ ಫಲವಾಗಿ ಆತ್ಮತತ್ತ್ವದಲ್ಲಿಯೇ ಸಾಧಕನು ನೆಲೆನಿಂತು ಸಾಧಕ, ಸಾಧನ, ಸಾಧ್ಯ- ಎಂಬ ತ್ರಿಪುಟಿಯನ್ನೂ ಮೀರಿ ಆತ್ಮನೇ ಆಗುವನು. ಅವನ ದೃಷ್ಟಿಯಿಂದ ಎಲ್ಲೆಲ್ಲೂ ಆತ್ಮನೇ ಬ್ರಹ್ಮವೊಂದೇ ಅವನ ಅನುಭವದಲ್ಲಿ ತೋರುವದು. ಇದೇ ಬ್ರಹ್ಮನಿಷ್ಠೆ, ಬ್ರಹ್ಮಭಾವ, ಮೋಕ್ಷ, ಬ್ರಾಹ್ಮೀಸ್ಥಿತಿ- ಎಂಬ ಹೆಸರುಗಳಿಂದ ಕರೆಯಲ್ಪಟ್ಟಿದೆ. ಇಂಥ ಸ್ಥಿತಿಯನ್ನು ಪಡೆದವನು ಕೃತಕೃತ್ಯನೂ ಸರ್ವಲೋಕಪೂಜ್ಯನೂ ಆದರ್ಶಪುರುಷನೂ ಆಗುವನು.

------

## ೬. ಉಪಸಂಹಾರ

೩೩. ಈ ಚಿಕ್ಕ ಪುಸ್ತಿಕೆಯಲ್ಲಿ ಕೇನೋಪನಿಷತ್ತಿನಲ್ಲಿ ವಿವರಿಸಿರುವ ಎಲ್ಲಾ ವಿಚಾರಗಳನ್ನೂ ಹೇಳಿರುವದಿಲ್ಲ. ಸಾಮಾನ್ಯರಿಗೆ ಉಪನಿಷತ್ತಿನ ಪರಿಚಯವನ್ನು ಮಾಡಿಕೊಟ್ಟು ಮುಂದೆ ಶಂಕರಭಾಷ್ಯಾನುಸಾರವಾಗಿ ಉಪನಿಷತ್ತನ್ನು ಅಭ್ಯಾಸಮಾಡಕೆಂಬ ಹಸಿವುಂಟಾಗುವಂತೆ ಮಾಡಲು ಮಾತ್ರ ಪ್ರಯತ್ನಿಸಿರುತ್ತದೆ. ಇಲ್ಲಿ ವಿವರಿಸಿರುವ ಮುಖ್ಯಪ್ರಮೇಯಗಳನ್ನೆಲ್ಲ ಶಂಕರಭಾಷ್ಯಾನುಸಾರವಾಗಿಯೇ ಬರೆದಿದೆ. ಅನೇಕ ವಿಷಯಗಳ ಬಗ್ಗೆ ವಿವರಣೆ ಇನ್ನೂ ಅಗತ್ಯವಿದೆ. ಉಪನ್ಯಾಸಗಳಲ್ಲಿ ನಾನು ಕೊಟ್ಟ ವಿವರಗಳನ್ನೆಲ್ಲ ಇಲ್ಲಿ ಉಲ್ಲೇಖಿಸಲಾಗಲಿಲ್ಲ, ಏಕೆಂದರೆ ಪುಸ್ತಕವು ವಿಸ್ತಾರವಾಗಬಹುದೆಂಬ ಶಂಕೆಯಿಂದ ಎಲ್ಲವನ್ನೂ ಸಂಕ್ಷೇಪಗೊಳಿಸಿದೆ. ಆದರೆ ಹೇಳಲೇಬೇಕಾಗಿದ್ದ ವಿಷಯಗಳು ಯಾವದನ್ನೂ ಬಿಟ್ಟಿಲ್ಲವೆಂದು ಭಾವಿಸಿದ್ದೇನೆ. ಎಷ್ಟೇ ಆದರೂ ಪುಸ್ತಕಗಳೆಂಬಿವು ಅಚೇತನವಸ್ತುಗಳು. ಅವುಗಳಿಂದ ಆಗುವ ಸಹಾಯವು ಅಲ್ಪವೇ. ನಿಜವಾಗಿ ಬ್ರಹ್ಮವಿದ್ಯೆಯನ್ನು ಬಯಸುವವನು ಬಲ್ಲವರಿಂದ ಕೇಳಿಯೇ ತಿಳಿಯಬೇಕು. ಸಾಮಾನ್ಯ ಶ್ರೋತೃಗಳು ಸಹ ಗುರುಮುಖದಿಂದ ಉಪದೇಶರೂಪವಾಗಿ

ಕೇಳಿದಾಗಲೇ ಹೆಚ್ಚು ವಿಷಯಗಳು ಮನದಟ್ಟಾಗುವವು. ಆದರೂ ಈವರೆಗೆ ವೇದಾಂತಶ್ರವಣಮಾಡಿ ಮುಂದುವರಿದಿರುವಂಥ ಸಾಧಕರಿಗೆ ಈ ಪುಸ್ತಿಕೆಯು ಉಪಯುಕ್ತವಾಗುವದರಲ್ಲಿ ಸಂಶಯವಿಲ್ಲ. ಇದರಲ್ಲಿರುವ ಗುಣವಿಶೇಷಗಳೆಲ್ಲ ನಮ್ಮ ಪೂಜ್ಯಗುರುಗಳಿಗೆ ಸೇರಿದ್ದು ; ದೋಷಗಳು ನನ್ನವು. ಸಹೃದಯರಾದ ವಾಚಕರು ದೋಷಗಳನ್ನು ತೋರಿಸಿಕೊಟ್ಟರೆ ತಿದ್ದಿಕೊಳ್ಳುವೆನು. ನನಗೆ ಗ್ರಂಥರಚನೆಯಿಂದ ಯಾವ ಹೆಚ್ಚಿನ ಕೀರ್ತಿಲಾಭ ಪೂಜಾದಿಗಳು ಬರಬೇಕೆಂಬ ಆಶೆಯಿಲ್ಲ. ಆದರೆ ನನ್ನ ತಿಳಿವಳಿಕೆಯನ್ನು ಬ್ರಹ್ಮಜ್ಞರೆಂಬ ಒರೆಗಲ್ಲಿಗೆ ತಿಕ್ಕಿ ಶುದ್ಧಿಗೊಳಿಸಿಕೊಳ್ಳಲು ಈ ಪುಸ್ತಕವನ್ನು ದ್ವಾರವಾಗಿ ಮಾಡಿಕೊಂಡಿದ್ದೇನೆ. ಈ ನನ್ನ ಅಲ್ಪಸೇವೆಯಿಂದ ಭಗವಾನ್ ನಾರಾಯಣನು ಸಂತುಷ್ಟನಾದರೆ ನಾನು ಕೃತಕೃತ್ಯನು- ಎಂದು ವಾಚಕರಲ್ಲಿ ಬಿನ್ನವಿಸಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸದ್ಗುರು ಮಹಾಸ್ವಾಮಿಗಳವರ ಪಾದಯುಗಲದಲ್ಲಿ ಈ ಗ್ರಂಥಪುಷ್ಪವನ್ನು ಅರ್ಪಿಸಿ ಲೇಖನಿಯನ್ನು ಕೆಳಗಿಡುವೆನು.

------

# ಕೇನೋಪನಿಷತ್ತು

(ಮೂಲ, ಅರ್ಥ- ಇವುಗಳೊಡನೆ)

## ಒಂದನೆಯ ಖಂಡ

ಓಂ ॥ ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ।
ಕೇನೇಷಿತಾಂ ವಾಚಮಿಮಾಂ ವದನ್ತಿ
ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ॥ ೧ ॥

೧. ಯಾರ ಇಷ್ಟದಂತೆ ಕಳುಹಲ್ಪಟ್ಟು ಮನಸ್ಸು ಎರಗುವದು ? ಮೊದಲನೆಯ ಪ್ರಾಣವು ಯಾರಿಂದ ಯುಕ್ತವಾಗಿ ಹೊರಡುತ್ತದೆ ? ಯಾರ

ಇಚ್ಛೆಯಿಂದ ಈ ವಾಕ್ಕನ್ನು ಆಡುತ್ತಾರೆ ? ಮತ್ತು ಚಕ್ಷುಸ್ಸನ್ನೂ ಶ್ರೋತ್ರವನ್ನೂ ಯಾವ ದೇವನು ಕಟ್ಟುಮಾಡುತ್ತಿರುವನು ?

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್
ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವನ್ತಿ ॥ ೨ ॥

೨. (ಅದು) ಶ್ರೋತ್ರಕ್ಕೆ ಶ್ರೋತ್ರವು. ಮನಸ್ಸಿಗೆ ಮನಸ್ಸು ವಾಕ್ಕಿಗೆ ವಾಕ್ಕು ಮತ್ತು ಅದೇ ಪ್ರಾಣಕ್ಕೆ ಪ್ರಾಣವು. ಚಕ್ಷುವಿಗೆ ಚಕ್ಷುವು. ಹೀಗಿರುವದರಿಂದ ಧೀರರು (ತಪ್ಪುತಿಳಿವಳಿಕೆಯನ್ನು) ಬಿಟ್ಟು ಈ ಲೋಕದಿಂದ ಹೊರಟುಹೋಗಿ ಅಮೃತರಾಗುವರು.

ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥ ೩ ॥

೩. ಅಲ್ಲಿಗೆ ಚಕ್ಷುಸ್ಸು ಹೋಗುವದಿಲ್ಲ. ವಾಕ್ಕು ಹೋಗುವದಿಲ್ಲ ಮನಸ್ಸು ಹೋಗುವದಿಲ್ಲ. (ಇದನ್ನು) ನಾವರಿಯೆವು, ಇದನ್ನು ಹೇಗೆ ತಿಳಿಯಪಡಿಸಬೇಕೋ ತಿಳಿಯೆವು.

ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ ।
ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ ॥೪॥

೪. ಅದು ತಿಳಿಯಲ್ಪಟ್ಟದ್ದಕ್ಕಿಂತಲೂ ಬೇರೆಯೇ ; ಮತ್ತು ತಿಳಿಯಲ್ಪಡದೆ ಇರುವದಕ್ಕಿಂತಲೂ ಬೇರೆಯೇ- ಎಂದು ನಮಗೆ ಅದನ್ನು ವಿವರಿಸಿ ಹೇಳಿದ ಹಿರಿಯವರಿಂದ ನಾವು ಕೇಳಿರುತ್ತೇವೆ.

ಯದ್ವಾಚಾಽನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೫ ॥

೫. ಯಾವದು ವಾಕ್ಕಿನಿಂದ ಹೇಳಲ್ಪಡುವದಿಲ್ಲವೋ ಯಾವದರಿಂದ ವಾಕ್ಕು ತಿಳಿಸಲ್ಪಡುವದೋ ಅದನ್ನೇ ಬ್ರಹ್ಮವೆಂದು ನೀನು ತಿಳಿ. ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದಲ್ಲ.

ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೬ ॥

೬. ಯಾವದನ್ನು ಮನಸ್ಸಿನಿಂದ ಮನನಮಾಡುವದಿಲ್ಲವೋ ಯಾವದರಿಂದ ಮನಸ್ಸು ಮನನಮಾಡಲ್ಪಡುವದೆಂದು ಹೇಳುವರೋ ಅದೇ ಬ್ರಹ್ಮವೆಂದು ತಿಳಿ. ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದು ಬ್ರಹ್ಮವಲ್ಲ.

ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೭ ॥

೭. ಯಾವದನ್ನು ಚಕ್ಷುವಿನಿಂದ ಕಾಣುವದಿಲ್ಲವೋ ಯಾವದರಿಂದ ಚಕ್ಷುಗಳನ್ನು ಕಾಣುತ್ತಾನೋ ಅದೇ ಬ್ರಹ್ಮವೆಂದು ನೀನು ತಿಳಿ. ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದು ಬ್ರಹ್ಮವಲ್ಲ.

ಯಚ್ಛ್ರೋತ್ರೇಣ ನ ಶೃಣೋತಿ
ಯೇನ ಶ್ರೋತ್ರಮಿದಗ್ಂ ಶ್ರುತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ
ನೇದಂ ಯದಿದಮುಪಾಸತೇ ॥ ೮ ॥

೮. ಯಾವದನ್ನು ಶ್ರೋತ್ರದಿಂದ ಕೇಳುವದಿಲ್ಲವೋ ಯಾವದರಿಂದ ಈ ಶ್ರೋತ್ರವು ಕೇಳಲ್ಪಡುವದೋ ಅದನ್ನೇ ಬ್ರಹ್ಮವೆಂದು ತಿಳಿ. ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಇದು ಬ್ರಹ್ಮವಲ್ಲ.

ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೯ ॥

೯. ಯಾವದನ್ನು ಘ್ರಾಣದಿಂದ ಮೂಸುವದಿಲ್ಲವೋ ಯಾವದರಿಂದ ಪ್ರಾಣವು ಕಳುಹಿಸಲ್ಪಡುವದೋ ಅದನ್ನೇ ಬ್ರಹ್ಮವೆಂದು ನೀನು ತಿಳಿ. ಯಾವದನ್ನು ಇದೆಂದು ಉಪಾಸನೆಮಾಡುತ್ತಾರೋ ಅದು ಬ್ರಹ್ಮವಲ್ಲ.

------

## ಎರಡನೆಯ ಖಂಡ

ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ
ನೂನಂ ತ್ವಂ ವೇತ್ಥ ಬ್ರಹ್ಮಣೋ ರೂಪಮ್ ।
ಯದಸ್ಯ ತ್ವಂ ಯದಸ್ಯ ದೇವೇಷ್ವಥ ನು
ಮೀಮಾಂಸ್ಯಮೇವ ತೇ ಮನ್ಯೇ ವಿದಿತಮ್ ॥ ೧ ॥

೧. (ಇದನ್ನು) ಚೆನ್ನಾಗಿ ಅರಿತುಕೊಂಡಿರುವೆನೆಂದು ನೀನು ಎಣಿಸುವೆಯಾದರೆ ನೀನು ಅರಿತಿರುವ ಈ (ಅಧ್ಯಾತ್ಮಬ್ರಹ್ಮದ) ಮತ್ತು ದೇವತೆಗಳಲ್ಲಿರುವ (ಬ್ರಹ್ಮದ) ರೂಪವು ನಿಜವಾಗಿಯೂ ಅಲ್ಪವೇ. ಆದ್ದರಿಂದ ನೀನು ಅರಿತಿರುವದು (ಇನ್ನೂ) ವಿಚಾರಿಸತಕ್ಕದ್ದೇ (ಆಗಿರುವದು) ಎಂದು ಎಣಿಸುವೆನು.

ನಾಹಂ ಮನ್ಯೇ ಸುವೇದೇತಿ
ನೋ ನ ವೇದೇತಿ ವೇದ ಚ ।
ಯೋ ನಸ್ತದ್ವೇದ ತದ್ವೇದ
ನೋ ನ ವೇದೇತಿ ವೇದ ಚ ॥ ೨ ॥

೨. ನಾನು ಚೆನ್ನಾಗಿ ಅರಿತುಕೊಂಡಿರುವೆನೆಂದು ಎಣಿಸಿರುವದಿಲ್ಲ, ಅರಿತುಕೊಂಡಿಲ್ಲವೆಂದೂ (ಎಣಿಸಿರುವ)ದಿಲ್ಲ, ಅರಿತೂ ಇರುತ್ತೇನೆ. "ಅರಿತುಕೊಂಡಿಲ್ಲವೆಂದೂ (ಎಣಿಸಿರುವ)ದಿಲ್ಲ, ಅರಿತೂ ಇರುತ್ತೇನೆ" ಎಂಬಿದನ್ನು ನಮ್ಮಲ್ಲಿ ಯಾವನು ಬಲ್ಲನೋ (ಅವನೇ) ಅದನ್ನು ಬಲ್ಲನು.

ಯಸ್ಯಾಮತಂ ತಸ್ಯ ಮತಂ
ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ
ವಿಜ್ಞಾತಮವಿಜಾನತಾಮ್ ॥ ೩ ॥

೩. ಯಾವನಿಗೆ (ಅದು) ತಿಳಿಯದಿರುವದೋ ಅವನಿಗೆ ತಿಳಿದಿರುವದು. ಯಾವನಿಗೆ ತಿಳಿದಿರುವದೋ ಅವನು ಅರಿಯನು. ಅರಿಯುವವರಿಗೆ ತಿಳಿಯದೆ ಇರುತ್ತದೆ ; ಅರಿಯದವರಿಗೆ ತಿಳಿದಿರುತ್ತದೆ.

ಪ್ರತಿಬೋಧವಿದಿತಂ ಮತ-
ಮಮೃತತ್ತ್ವಂ ಹಿ ವಿನ್ದತೇ ।
ಆತ್ಮನಾ ವಿನ್ದತೇ ವೀರ್ಯಂ
ವಿದ್ಯಯಾ ವಿನ್ದತೇಽಮೃತಮ್ ॥ ೪ ॥

೪. ಪ್ರತಿಬೋಧದಲ್ಲಿಯೂ ತಿಳಿದರೆ ಸರಿಯಾಗಿ ತಿಳಿದಂತಾಯಿತು. ಏಕೆಂದರೆ (ಆಗ) ಅಮೃತತ್ವವನ್ನು ಪಡೆಯುತ್ತಾನೆ. ಆತ್ಮನಿಂದ ವೀರ್ಯವನ್ನು ಪಡೆಯುತ್ತಾನೆ, ವಿದ್ಯೆಯಿಂದ ಅಮೃತತ್ವವನ್ನು ಪಡೆಯುತ್ತಾನೆ.

ಇಹ ಚೇದವೇದೀದಥ ಸತ್ಯಮಸ್ತಿ
ನ ಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷು ಭೂತೇಷು ವಿಚಿತ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವನ್ತಿ ॥ ೫ ॥

೫. ಇಲ್ಲಿಯೇ ಅರಿತುಕೊಂಡನಾದರೆ ಆಗ ಸತ್ಯವುಂಟು, ಇಲ್ಲಿ ಅರಿತುಕೊಳ್ಳಲಿಲ್ಲವಾದರೆ ದೊಡ್ಡ ವಿನಾಶವು. ಧೀರರಾದವರು ಎಲ್ಲಾ ಭೂತಗಳಲ್ಲಿಯೂ ಅರಿತುಕೊಂಡು ಈ ಲೋಕದಿಂದ ಹೊರಟುಹೋಗಿ ಅಮೃತರಾಗುವರು.

------

## ಮೂರನೆಯ ಖಂಡ

ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ ತಸ್ಯ ಹ ಬ್ರಹ್ಮಣೋ
ವಿಜಯೇ ದೇವಾ ಅಮಹೀಯನ್ತ।
ತ ಐಕ್ಷನ್ತಾಸ್ಮಾಕಮೇವಾಯಂ
ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥ ೧ ॥

೧. ಬ್ರಹ್ಮವು ದೇವತೆಗಳಿಗೆ ವಿಜಯವನ್ನು ಕೊಟ್ಟಿತಂತೆ. ಆ ಬ್ರಹ್ಮದ ವಿಷಯದಲ್ಲಿ ದೇವತೆಗಳು ಮಹಿಮಾವಂತರಾದರು. ಅವರು "ಈ ವಿಜಯವು ನಮ್ಮದು, ಈ ಮಹಿಮೆಯು ನಮ್ಮದು" ಎಂದು ಯೋಚಿಸಿ ಕೊಂಡರು.

ತದ್ಧೈಷಾಂ ವಿಜಜ್ಞೌ ತೇಭ್ಯೋ ಹ ಪ್ರಾದುರ್ಬಭೂವ।
ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ॥ ೨ ॥

೨. ಇವರ (ಭಾವನೆಯನ್ನು) ಅದು ತಿಳಿದುಕೊಂಡಿತಂತೆ, ಅವರಿಗೆ ಕಾಣಿಸಿಕೊಂಡಿತಂತೆ. ಇದು ಯಾವ ಯಕ್ಷನೆಂಬುದನ್ನು ಅವರು ತಿಳಿಯಲಿಲ್ಲ.

ತೇಽಗ್ನಿಮಬ್ರುವನ್ ಜಾತವೇದ ಏತದ್ವಿಜಾನೀಹಿ
ಕಿಮೇತದ್ಯಕ್ಷಮಿತಿ ತಥೇತಿ ॥ ೩ ॥
ತದಭ್ಯದ್ರವತ್ ತಮಭ್ಯವದತ್ ಕೋಽಸೀತ್ಯಗ್ನಿರ್ವಾ
ಅಹಮಸ್ಮೀತ್ಯಬ್ರವೀಜ್ಜಾತವೇದಾ ವಾ ಅಹಮಸ್ಮೀತಿ ॥ ೪ ॥
ತಸ್ಮಿಗ್ಂಸ್ತ್ವಯಿ ಕಿಂ ವೀರ್ಯಮಿತ್ಯಪೀದಗ್ಂ
ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ ॥ ೫ ॥
ತಸ್ಮೈ ತೃಣಂ ನಿದಧಾವೇತದ್ದಹೇತಿ
ತದುಪಪ್ರೇಯಾಯ ಸರ್ವಜವೇನ
ತನ್ನ ಶಶಾಕ ದಗ್ಧುಂ ಸ ತತ ಏವ ನಿವವೃತೇ
ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೬ ॥

೩-೬. ಅವರು ಅಗ್ನಿಯನ್ನು (ಕುರಿತು) ''ಜಾತವೇದನೆ, ಇದು ಯಾವ ಯಕ್ಷನೋ ಅದನ್ನು ತಿಳಿದುಕೊಂಡು ಬಾ'' ಎಂದು ಹೇಳಿದರು. ಆಗಲಿ ! ಎಂದು ಅದರ ಬಳಿಗೆ ಓಡಿದನು. ಅವನನ್ನು 'ನೀನು ಯಾರು?' ಎಂದು ಕೇಳಿತು. ''ನಾನು ಅಗ್ನಿಯೇ ಆಗಿರುವೆನು, ನಾನು ಜಾತವೇದನೇ ಆಗಿರುವೆನು'' ಎಂದನು. ''ಆ ನಿನ್ನಲ್ಲಿರುವ ವೀರ್ಯವು ಯಾವದು ?'' ಎನ್ನಲು ''ಈ ಪೃಥಿವಿಯಲ್ಲಿ ಯಾವಯಾವದು ಇದೆಯೋ ಇದನ್ನೆಲ್ಲ ಸುಟ್ಟೇನು'' ಎಂದನು. ''ಇದನ್ನು ಸುಡು'' ಎಂದು ಅವನೆದುರಿಗೆ ಹುಲ್ಲು ಕಡ್ಡಿಯನ್ನಿಟ್ಟಿತು. ತನ್ನ ಎಲ್ಲಾ ವೇಗದಿಂದಲೂ ಅದರ ಬಳಿಗೆ ಬಂದನು ; ಅದನ್ನು ಸುಡುವದಕ್ಕಾಗಲಿಲ್ಲ. ''ಇದು ಯಾವ ಯಕ್ಷನೆಂಬುದನ್ನು ತಿಳಿಯುವದಕ್ಕೆ ಶಕ್ತನಾಗಲಿಲ್ಲ'' ಎಂದು ಅವನು ಅಲ್ಲಿಂದಲೇ ಹಿಂತಿರುಗಿದನು.

ಅಥ ವಾಯುಮಬ್ರುವನ್ ವಾಯವೇತ-
ದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ ॥ ೭ ॥
ತದಭ್ಯದ್ರವತ್ ತಮಭ್ಯವದ್ ಕೋಽಸೀತಿ ವಾಯುರ್ವಾ
ಅಹಮಸ್ಮೀತ್ಯಬ್ರವೀನ್ಮಾತರಿಶ್ವಾ ವಾ ಅಹಮಸ್ಮೀತಿ ॥ ೮ ॥
ತಸ್ಮಿಗ್‌ಂ ಸ್ತ್ವಯಿ ಕಿಂ ವೀರ್ಯಮಿತ್ಯಪೀದಗ್‌ಂ
ಸರ್ವಮಾದದೀಯ ಯದಿದಂ ಪೃಥಿವ್ಯಾಮಿತಿ ॥ ೯ ॥
ತಸ್ಮೈ ತೃಣಂ ನಿದಧಾವೇತದಾದತ್ಸ್ವೇತಿ ತದುಪಪ್ರೇಯಾಯ
ಸರ್ವಜವೇನ ತನ್ನ ಶಶಾಕಾದಾತುಂ ಸ ತತ ಏವ ನಿವವೃತೇ
ನೈತದಶಕಂ ವಿಜ್ಞಾತುಂ ಯದೇತದ್ ಯಕ್ಷಮಿತಿ ॥ ೧೦ ॥

೭-೧೦. ಆಮೇಲೆ ವಾಯುವನ್ನು ಕುರಿತು ''ವಾಯುವೆ, ಇದು ಯಾವ ಯಕ್ಷನೋ ತಿಳಿದುಕೊಂಡು ಬಾ'' ಎಂದರು. ''ಆಗಲಿ !'' ಎಂದು ಅದರ ಬಳಿಗೆ ಓಡಿದನು. ಅವನನ್ನು ''ನೀನು ಯಾರು ?'' ಎಂದು ಕೇಳಿತು. ''ವಾಯುವೇ ನಾನಾಗಿರುವೆನು, ನಾನು ಮಾತರಿಶ್ವನೇ ಆಗಿರುವೆನು''

ಎಂದನು. ''ಆ ನಿನ್ನಲ್ಲಿರುವ ವೀರ್ಯವು ಯಾವದು ?'' ಎನ್ನಲು ''ಈ ಪೃಥಿವಿಯಲ್ಲಿ ಯಾವಯಾವದು ಇದೆಯೋ ಇದನ್ನೆಲ್ಲ ಎತ್ತಿಕೊಂಡೇನು'' ಎಂದನು. ''ಇದನ್ನು ಎತ್ತಿಕೊ !'' ಎಂದು ಅವನೆದುರಿಗೆ ಹುಲ್ಲುಕಡ್ಡಿಯನ್ನಿಟ್ಟಿತು. ತನ್ನ ಎಲ್ಲಾ ವೇಗದಿಂದಲೂ ಅದರ ಬಳಿಗೆ ಬಂದನು ; ಅದನ್ನು ಎತ್ತಿಕೊಳ್ಳುವದಾಗಲಿಲ್ಲ. ''ಇದು ಯಾವ ಯಕ್ಷನೆಂಬುದನ್ನು ತಿಳಿಯುವದಕ್ಕೆ ಶಕ್ತನಾಗಲಿಲ್ಲ'' ಎಂದು ಅವನು ಅಲ್ಲಿಂದಲೇ ಹಿಂತಿರುಗಿದನು.

ಅಥೇನ್ದ್ರಮಬ್ರುವನ್ ಮಘವನ್ನೇತದ್ವಿಜಾನೀಹಿ ಕಿಮೇತ
ದ್ಯಕ್ಷಮಿತಿ ತಥೇತಿ । ತದಭ್ಯದ್ರವತ್ ತಸ್ಮಾತ್ ತಿರೋದಧೇ ॥

೧೧. ಆಮೇಲೆ ಇಂದ್ರನನ್ನು ಕುರಿತು ''ಮಘವಂತನೆ, ಇದು ಯಾವ ಯಕ್ಷನೋ ಅದನ್ನು ತಿಳಿದುಕೊಂಡು ಬಾ'' ಎಂದರು. ''ಆಗಲಿ!'' ಎಂದು ಆದರ ಬಳಿಗೆ ಓಡಿದನು. (ಅದು) ಅವನಿಂದ ಮರೆಯಾಯಿತು.

ಸ ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹುಶೋಭ-
ಮಾನಾಮುಮಾಗ್ಂ ಹೈಮವತೀಂ ತಾಗ್ಂ ಹೋವಾಚ
ಕಿಮೇತದ್ಯಕ್ಷಮಿತಿ ॥ ೧೨ ॥

೧೨. ಅವನು ಅದೇ ಆಕಾಶದಲ್ಲಿ (ಒಬ್ಬ) ಸ್ತ್ರೀಯನ್ನು - ಬಹುವಾಗಿ ಶೋಭಿಸುವ ಹೈಮವತಿಯಾದ ಉಮೆಯನ್ನು - ಬಳಿಸಾರಿದನು. ಆಕೆಯನ್ನು ''ಇದು ಯಾವ ಯಕ್ಷನು ?'' ಎಂದು ಕೇಳಿದನು.

------

## ನಾಲ್ಕನೆಯ ಖಂಡ

ಸಾ ಬ್ರಹ್ಮೇತಿ ಹೋವಾಚ ಬ್ರಹ್ಮಣೋ ವಾ ಏತದ್ವಿಜಯೇ
ಮಹೀಯಧ್ವಮಿತಿ ತತೋ ಹೈವ ವಿದಾಞ್ಚಕಾರ ಬ್ರಹ್ಮೇತಿ ॥ ೧ ॥

೧. ಆಕೆಯು '' (ಅದು) ಬ್ರಹ್ಮವು'' ಎಂದು ಹೇಳಿದಳಂತೆ ''ಬ್ರಹ್ಮದ ವಿಜಯದಲ್ಲಿಯೇ ಹೀಗೆ ಮಹಿಮಾವಂತರಾದಿರಿ'' ಎಂದು

(ನುಡಿದಳಂತೆ). ಆದರಿಂದಲೇ (ಅವನು ಅದು) ಬ್ರಹ್ಮವೆಂದು ತಿಳಿದು ಕೊಂಡನಂತೆ.

ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ ದೇವಾನ್
ಯದಗ್ನಿರ್ವಾಯುರಿನ್ದ್ರಸ್ತೇ ಹ್ಯೇನನ್ನೇದಿಷ್ಠಂ ಪಸ್ಪರ್ಶುಸ್ತೇ
ಹ್ಯೇನತ್ ಪ್ರಥಮೋ ವಿದಾಞ್ಚಕಾರ ಬ್ರಹ್ಮೇತಿ ॥ ೨ ॥

೨. ಆದ್ದರಿಂದಲೇ ಅಗ್ನಿ, ವಾಯು, ಇಂದ್ರ - ಎಂಬ ಈ ದೇವತೆಗಳು ಮಿಕ್ಕ ದೇವತೆಗಳನ್ನು ಮೀರಿರುವರು. ಏಕೆಂದರೆ ಅವರೇ ಅತ್ಯಂತಸಮೀಪವಾದ ಇದನ್ನು ಮುಟ್ಟಿದರು ; ಏಕೆಂದರೆ ಅವರೇ ಇದನ್ನು ಬ್ರಹ್ಮವೆಂದು ಮೊದಲು ತಿಳಿದುಕೊಂಡರು.

ತಸ್ಮಾದ್ವಾ ಇನ್ದ್ರೋ ಅತಿತರಾಮಿವಾನ್ಯಾನ್ ದೇವಾನ್ ಸ
ಹ್ಯೇನನ್ನೇದಿಷ್ಠಂ ಪಸ್ಪರ್ಶ ಸ ಹ್ಯೇನತ್ ಪ್ರಥಮೋ ವಿದಾ-
ಞ್ಚಕಾರ ಬ್ರಹ್ಮೇತಿ ॥ ೩ ॥

೩. ಆದ್ದರಿಂದಲೇ ಇಂದ್ರನು ಮಿಕ್ಕ ದೇವತೆಗಳನ್ನು ಮೀರಿರುವನು. ಏಕೆಂದರೆ ಅವನೇ ಅತ್ಯಂತಸಮೀಪವಾದ ಇದನ್ನು ಮುಟ್ಟಿದನು ; ಏಕೆಂದರೆ ಅವನೇ ಮೊದಲು ಇದನ್ನು ಬ್ರಹ್ಮವೆಂದು ತಿಳಿದುಕೊಂಡನು.

ತಸ್ಯೈಷ ಆದೇಶೋ ಯದೇತದ್ವಿದ್ಯುತೋ ವ್ಯದ್ಯುತದಾ ೩
ಇತೀನ್ನ್ಯಮೀಮಿಷದಾ ೩ ಇತ್ಯಧಿದೈವತಮ್ ॥ ೪ ॥

೪. ಅದಕ್ಕೆ ಇದು ಆದೇಶವು "ಮಿಂಚಿನ ಹೊಳಪಿನಂತೆ" ಎಂದೂ 'ಕಣ್ಣು ಮಿಟುಕಿಸಿದಂತೆ' ಎಂದೂ ಇದೇ ಆದೇಶವು. ಇದು ಅಧಿದೈವತವು.

ಅಥಾಧ್ಯಾತ್ಮಂ ಯದೇತದ್ಗಚ್ಛತೀವ ಚ ಮನೋಽನೇನ
ಚೈತದುಪಸ್ಮರತ್ಯಭೀಕ್ಷ್ಣಂ ಸಂಕಲ್ಪಃ ॥ ೫ ॥

೫. ಇನ್ನು ಅಧ್ಯಾತ್ಮವು ; ಮನಸ್ಸು ಇದರ ಬಳಿಗೆ ಹೋಗುವಂತಿರುವದಲ್ಲವೆ ? ಇದರಿಂದ ಇದನ್ನು ಚೆನ್ನಾಗಿ ಉಪಸ್ಮರಣೆ

ಮಾಡುತ್ತಾನಲ್ಲವೆ ? ಸಂಕಲ್ಪವೂ (ಅದರ ವಿಷಯದಲ್ಲಿ ಉಂಟಾಗುತ್ತದೆ ಯಲ್ಲವೆ ? ಇದೇ ಅಧ್ಯಾತ್ಮವು).

ತದ್ಧ ತದ್ವನಂ ನಾಮ ತದ್ವನಮಿತ್ಯುಪಾಸಿತವ್ಯಂ ಸ ಯ ಏತ
ದೇವಂ ವೇದಾಭಿ ಹೈನಗ್ಂ ಸರ್ವಾಣಿ ಭೂತಾನಿ ಸಂವಾಞ್ಛನ್ತಿ ||

೬. ಅದು ತದ್ವನವೆನಿಸಿರುವದಂತೆ. ತದ್ವನವೆಂತ ಉಪಾಸನೆ ಮಾಡಬೇಕು. ಯಾವಾತನು ಇದನ್ನು ಹೀಗೆಂದು ತಿಳಿಯುವನೋ ಅವನನ್ನು ಎಲ್ಲಾ ಭೂತಗಳೂ ಬಯಸುತ್ತಿರುವವು.

ಉಪನಿಷದಂ ಭೋ ಬ್ರೂಹೀತ್ಯುಕ್ತಾ ತ ಉಪನಿಷದ್
ಬ್ರಾಹ್ಮೀಂ ವಾ ತ ಉಪನಿಷದಮಬ್ರೂಮೇತಿ || ೭ ||

೭. ''ಪೂಜ್ಯರೆ, ಉಪನಿಷತ್ತನ್ನು ಹೇಳಬೇಕು'', ''ನಿನಗೆ ಉಪನಿಷತ್ತನ್ನು ಹೇಳಿದ್ದಾಗಿದೆ. ಬ್ರಹ್ಮದ ಉಪನಿಷತ್ತನ್ನೇ ನಿನಗೆ ಹೇಳಿರುತ್ತೇವೆ.''.

ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ ವೇದಾಃ ಸರ್ವಾಙ್ಗಾನಿ
ಸತ್ಯಮಾಯತನಮ್ || ೮ ||

೮. ಅದಕ್ಕೆ ತಪಸ್ಸು, ದಮ, ಕರ್ಮ - ಎಂಬಿವು ಪ್ರತಿಷ್ಠೆಯು, ವೇದಗಳು ಎಲ್ಲಾ ಅಂಗಗಳು ; ಸತ್ಯವು ಆಯತನವು.

ಯೋ ವಾ ಏತಾಮೇವಂ ವೇದಾಪಹತ್ಯ ಪಾಪ್ಮಾನಮನ್ತೇ
ಸ್ವರ್ಗೇ ಲೋಕೇ ಜ್ಯೇಯೇ ಪ್ರತಿತಿಷ್ಠತಿ ಪ್ರತಿತಿಷ್ಠತಿ || ೯ ||

೯. ಯಾವನೇ ಆಗಲಿ, ಇದನ್ನು ಹೀಗೆಂದು ತಿಳಿಯುತ್ತಾನಾದರೆ ಪಾಪವನ್ನು ನಾಶಮಾಡಿಕೊಂಡು ಅನಂತವಾದ ಹೆಚ್ಚಿನ ಸ್ವರ್ಗದಲ್ಲಿ ಪ್ರತಿಷ್ಠಿತನಾಗುವನು.

|| ಹರಿಃ ಓಂ ||

|| ಇತಿ ಕೇನೋಪನಿಷತ್ ಸಮಾಪ್ತಾ ||

# ಉಪನಿಷತ್ತಿನ ಸಾರ

## ಒಂದನೆಯ ಖಂಡ

೧-೨. ನಮ್ಮ ಮನಸ್ಸೂ ಇಂದ್ರಿಯಗಳೂ ತಾವು ತಾವೇ ತಮ್ಮ ವಿಷಯಗಳನ್ನು ಅರಿಯುವದಿಲ್ಲ, ತಾವು ತಾವೇ ತಮ್ಮ ವ್ಯಾಪಾರವನ್ನು ಮಾಡುವದಿಲ್ಲ. ತಮ್ಮ ಜೀವಾಳವಾಗಿರುವ ಆತ್ಮಚೈತನ್ಯದ ಸನ್ನಿಧಿಯ ಬಲದಿಂದಲೇ ಇವು ಕೆಲಸಮಾಡುತ್ತಿರುತ್ತವೆ. ಇವುಗಳಲ್ಲಿ ನಾನು ನನ್ನದೆಂಬ ಭಾವನೆಯನ್ನು ತೊರೆದ ಧೀರರು ಅಮೃತರಾಗುತ್ತಾರೆ.

೩--೮. ಆತ್ಮತತ್ತ್ವವನ್ನು ಇಂದ್ರಿಯಗಳಾಗಲಿ ಮನಸ್ಸಾಗಲಿ ವಿಷಯೀಕರಿಸಲಾರವು. ಆದ್ದರಿಂದ ಅದನ್ನು ಇಂಥದ್ದೆಂದು ವಿಷಯವಾಗಿಸಿಕೊಂಡು ಅರಿಯುವದಕ್ಕೆ ಆಗುವದಿಲ್ಲ ; ಮತ್ತೊಬ್ಬರಿಗೆ ಇಂಥದ್ದೆಂದು ತಿಳಿಸುವದಕ್ಕೂ ಆಗುವದಿಲ್ಲ. ಅದು ಅರಿಯಲ್ಪಡತಕ್ಕದ್ದು, ಅರಿಯಲ್ಪಡಲಾಗದ್ದು-ಎಂದು ಎರಡು ಬಗೆಯಾಗಿರುವ ವಿಷಯರಾಶಿಗಿಂತಲೂ ಬೇರೆಯಾಗಿಯೇ ಇರುವದು. ಯಾವದನ್ನು ಇಂದ್ರಿಯಮನ ಆದಿಗಳು ಅರಿಯಲಾರವೋ ಯಾವದು ಅವುಗಳನ್ನೆಲ್ಲ ಸ್ವಭಾವವಾದ ಅರಿವಿನಿಂದ ಬೆಳಗುತ್ತಿರುವದೋ ಆ ನಮ್ಮ ಆತ್ಮನೇ ಅದು- ಎಂದು ಮಾತ್ರ ಅದನ್ನು ತಿಳಿದುಕೊಳ್ಳಬಹುದು ; ಇದು ಎಂದು ವಿಷಯೀಕರಿಸಬಹುದಾದದ್ದು ಯಾವದೂ ಅದಲ್ಲ.

## ಎರಡನೆಯ ಖಂಡ

೧-೪. ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲವಾದಕಾರಣ ಯಾರು ಇದನ್ನು ಇಂಥದ್ದೆಂದು ಅರಿತುಕೊಂಡೆವೆಂದು ಭಾವಿಸುವರೋ ಅವರು ಇದರ ಪರಮಾರ್ಥವನ್ನು ಅರಿಯರು. ಇದು ಯಾವದಕ್ಕೂ ವಿಷಯವಲ್ಲವೆಂದು ನಿಶ್ಚಯಿಸಿರುವವರೇ ಇದರ ನಿಜವನ್ನು ಬಲ್ಲರು. ಬ್ರಹ್ಮದ

ಸ್ವರೂಪವು ನಮಗೆ ಹೇಗೂ ತಿಳಿಯಬರುವದೇ ಇಲ್ಲವೆಂದು ಎಣಿಸಬಾರದು. ಏಕೆಂದರೆ ಮನಸ್ಸಿನಲ್ಲಿ ಯಾವ ಪ್ರತ್ಯಯವುಂಟಾದರೂ ಅದನ್ನೆಲ್ಲ ಬೆಳಗುತ್ತಿರುವ ಸ್ವಯಂಪ್ರಕಾಶವಾದ ಆತ್ಮಚೈತನ್ಯರೂಪಸಾಕ್ಷಿಯಾಗಿ ಅದು ನಮಗೆ ತಿಳಿದುಬರುತ್ತಲೇ ಇರುವದು. ಹೀಗೆಂದು ಅರಿತವನಿಗೆ ಆತ್ಮನ ಸ್ವಭಾವವಾದ ಬಲವು ದಕ್ಕುವದು, ಈ ತಿಳಿವಳಿಕೆಯಿಂದ ಅಮೃತತ್ವವೂ ದೊರಕುವದು.

೫. ಮೇಲೆ ಹೇಳಿದ ರೀತಿಯಲ್ಲಿ ಬದುಕಿರುವಾಗಲೇ ಅರಿತುಕೊಂಡರೆ ಪರಮಾರ್ಥಸತ್ಯದ ಲಾಭವಾಗಿ ಜನ್ಮವು ಸಾರ್ಥಕವಾಗುವದು. ಇಲ್ಲದಿದ್ದರೆ ಸಂಸಾರದಲ್ಲಿ ತಪ್ಪದೆ ತೊಳಲಬೇಕಾಗಿರುವದರಿಂದ ಜನ್ಮವು ವ್ಯರ್ಥವಾಗಿ ದೊಡ್ಡ ನಷ್ಟವಾದಂತೆ ಆಗುವದು. ಆದ್ದರಿಂದ ಜಾಣರಾದವರು ಸರ್ವಪ್ರಾಣಿಗಳಿಗೂ ಆತ್ಮನಾಗಿರುವ ಈ ಬ್ರಹ್ಮವನ್ನು ಕಂಡುಕೊಂಡು ಅಮೃತರಾಗುವರು.

## ಮೂರನೆಯ ಖಂಡ

೧. ಹಿಂದಕ್ಕೆ ದೇವತೆಗಳಿಗೂ ಅಸುರರಿಗೂ ಸಂಗ್ರಾಮವಾಗಲು ಪರಬ್ರಹ್ಮವು ದೇವತೆಗಳಿಗೆ ಜಯವನ್ನು ತಂದುಕೊಟ್ಟಿತು. ಆದರೆ ದೇವತೆಗಳು ತಾವೇ ಜಯಿಸಿ ಮಹಿಮೆಯನ್ನು ಪಡೆದುಕೊಂಡೆವೆಂದುಕೊಂಡರು.

೨-೬. ಇವರ ಮಿಥ್ಯಾಭಿಮಾನವನ್ನರಿತುಕೊಂಡ ಬ್ರಹ್ಮವು ಒಂದು ಅದ್ಭುತವಾದ ಯಕ್ಷರೂಪವನ್ನು ಧರಿಸಿ ಅವರಿಗೆ ಕಾಣಿಸಿಕೊಂಡಿತು. ಆಗ ದೇವತೆಗಳು ಆದದ್ದೆಲ್ಲವನ್ನೂ ತಿಳಿಯಬಲ್ಲವನೆಂದು ಪ್ರಸಿದ್ಧನಾದ ಅಗ್ನಿಯನ್ನು 'ಈ ಯಕ್ಷನು ಯಾರೆಂಬುದನ್ನು ತಿಳಿದುಕೊಂಡು ಬಾ'- ಎಂದು ಕಳುಹಿಸಿದರು. ಬ್ರಹ್ಮವು ''ನೀನು ಯಾರು ?'' ಎಂದು ಕೇಳಲು

''ಲೋಕದಲ್ಲಿರುವವದನ್ನೆಲ್ಲ ಸುಡುವ ಅಗ್ನಿಯು ನಾನು, (ಆದದ್ದನ್ನೆಲ್ಲ ಅರಿಯುವ) ಜಾತವೇದನು ನಾನು'' ಎಂದು ಅಗ್ನಿಯು ಉತ್ತರವನ್ನು ಕೊಟ್ಟನು. ''ಹಾಗಾದರೆ ಇದನ್ನು ಸುಡು'' ಎಂದು ಒಂದು ಹುಲ್ಲು ಕಡ್ಡಿಯನ್ನು ಬ್ರಹ್ಮವು ಅವನ ಮುಂದಿಡಲು ಅಗ್ನಿಯು ಅದನ್ನು ಸುಡಲಾರದೆ ಹೋದನು ; ಆದ್ದರಿಂದ ಅವನು ನಾಚಿಕೊಂಡು ಯಕ್ಷನ ನಿಜವನ್ನು ಅರಿಯಲಾರದೆ ಹಿಂದಿರುಗಿದನು.

೭-೧೦. ಆಮೇಲೆ ದೇವತೆಗಳು ವಾಯುವನ್ನು ಈ ಕೆಲಸಕ್ಕೆ ಕಳುಹಿಸಿದರು. ಪೃಥ್ವಿಯಲ್ಲಿರುವವದನ್ನೆಲ್ಲ ಎತ್ತಬಲ್ಲೆನೆಂದು ಕೊಚ್ಚಿಕೊಂಡ ವಾಯುವಿನಿಂದ ಆ ಹುಲ್ಲುಕಡ್ಡಿಯನ್ನು ಕೂಡ ಎತ್ತುವದಾಗಲಿಲ್ಲ. ವಾಯುವೂ ಯಕ್ಷನ ನಿಜವನ್ನರಿಯಲಾರದೆ ಹಿಂದಿರುಗಿದನು.

೧೧-೧೨. ಆಮೇಲೆ ದೇವತೆಗಳು ಯಕ್ಷನು ಯಾರೆಂಬುದನ್ನು ಅರಿತುಕೊಂಡುಬರುವದಕ್ಕೆ ಇಂದ್ರನನ್ನು ಕಳುಹಿಸಿದರು. ಬ್ರಹ್ಮವು ಅವನಿಗೆ ದರ್ಶನವನ್ನುಕೂಡ ಕೊಡದೆ ಅಲ್ಲಿಯೇ ಮಾಯವಾಯಿತು. ಇಂದ್ರನು ಅಲ್ಲಿಯೇ ನಿಂತಿರಲು ಬ್ರಹ್ಮವಿದ್ಯಾದೇವಿಯು ಅವನಿಗೆ ಸುಂದರಿಯಾದ ಸ್ತ್ರೀಯ ರೂಪದಿಂದ ದರ್ಶನವನ್ನು ಕೊಟ್ಟಳು. ಆಕೆಯನ್ನು ''ಈ ರೂಪದ ನಿಜವೇನು ?'' ಎಂದು ಇಂದ್ರನು ಕೇಳಿದನು.

## ನಾಲ್ಕನೆಯ ಖಂಡ

೧. ಆಕೆಯು ''ಇದು ಬ್ರಹ್ಮವು. ಈ ಬ್ರಹ್ಮವು ಜಯವನ್ನು ತಂದುಕೊಟ್ಟದ್ದರಿಂದಲೇ ನೀವು ಮಹಿಮಾವಂತರಾಗಿರುವಿರಿ'' ಎಂದಳು. ಆಗ ಆಕೆಯ ಉಪದೇಶದಿಂದಲೇ ಇಂದ್ರನಿಗೆ ಇದು ಬ್ರಹ್ಮವು- ಎಂಬ ಅರಿವಾಯಿತು.

೨-೩. ಹೀಗೆ ಅಗ್ನಿ, ವಾಯು, ಇಂದ್ರ - ಈ ಮೂವರೂ ಬ್ರಹ್ಮವನ್ನು ಕಂಡು ಮಾತನಾಡಿದ್ದವರಾದ್ದರಿಂದ ಮಿಕ್ಕ ದೇವತೆಗಳಿಗಿಂತ ಹೆಚ್ಚಿನವ

ರಾದರು. ಅದರಲ್ಲಿಯೂ ಇಂದ್ರನು ಮೊಟ್ಟಮೊದಲು ಇದು ಬ್ರಹ್ಮವು- ಎಂದು ತಿಳಿದುಕೊಂಡವನಾದಕಾರಣ ದೇವತೆಗಳಲ್ಲೆಲ್ಲ ಶ್ರೇಷ್ಠನೆನಿಸಿದನು.

೪-೫. ಆ ಬ್ರಹ್ಮಕ್ಕೆ ಉಪಮಾನವನ್ನು ಕೊಡಬೇಕಾದರೆ 'ಮಿಂಚು ಥಳಾರೆಂದು ಹೊಳೆದು ಮರೆಯಾಗುವಂತೆ', 'ಕಣ್ಣು ತೆರೆದು ಮುಚ್ಚಿಕೊಳ್ಳು ವಂತೆ' ಎಂಬ ಅಧಿದೈವತವಾದ ಹೋಲಿಕೆಗಳನ್ನೂ ಮನಸ್ಸಿನ ಪ್ರತ್ಯಯಗಳು ಹುಟ್ಟಿ ಹೋಗುವಾಗಲೆಲ್ಲ ಅಭಿವ್ಯಕ್ತವಾಗುವ ರೂಪವೆಂದು ಅಧ್ಯಾತ್ಮವಾದ ಹೋಲಿಕೆಯನ್ನೂ ಕೊಟ್ಟು ವರ್ಣಿಸಬಹುದು.

೬. ಅದು ಎಲ್ಲರಿಗೂ ಆತ್ಮಸ್ವರೂಪವಾಗಿರುವದರಿಂದ ಅದನ್ನು ಎಲ್ಲರೂ ಪ್ರೀತಿಯಿಂದ ಭಜಿಸುವರು ; ಆದ್ದರಿಂದ ಅದನು ''ತದ್ವನಮ್'' (ಪ್ರಾಣಿಗಳಿಗೆಲ್ಲ ಪ್ರಿಯವಾಗಿರುವದು) ಎಂಬ ಹೆಸರಿನಿಂದ ಉಪಾಸನೆ ಮಾಡಬೇಕು.

೭. ಪರಮಾತ್ಮನ ಉಪನಿಷತ್ತು ಇಷ್ಟೇ, ಇದಕ್ಕಿಂತ ಹೆಚ್ಚಿನ ದೇನೂ ಇರುವದಿಲ್ಲ. ಇದನ್ನು ಪಡೆದುಕೊಳ್ಳುವದಕ್ಕೆ ತಪಸ್ಸು, ದಮ, ಕರ್ಮ, ವೇದಾಂತಗಳ ಜ್ಞಾನ- ಇವೆಲ್ಲವೂ ಬೇಕಾಗುವ ಸಾಧನಗಳು. ವಿಶೇಷವಾಗಿ ಸತ್ಯವೆಂಬ ಸಾಧನವು ಅವಶ್ಯವಾಗಿ ಬೇಕಾಗುವದು.

೮. ಇಲ್ಲಿ ವರ್ಣಿಸಿರುವ ಪ್ರಕಾರದಿಂದ ಬ್ರಹ್ಮವನ್ನು ಅರಿತುಕೊಂಡಾತನು ಸಕಲಕಲ್ಮಷಗಳನ್ನೂ ತೊಲಗಿಸಿಕೊಂಡು ಆ ಪರ ಬ್ರಹ್ಮದಲ್ಲಿಯೇ ನಿಲುಗಡೆಯನ್ನು ಪಡೆಯುವನು.

-------

## ವೇ॥ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳ ಕಿರುಪರಿಚಯ

ಶ್ರೀ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ಉಭಯ ವಿದ್ವಾನ್ ದಿ॥ ಶೃಂಗೇರಿ ಶ್ರೀಕಂಠಘನಪಾಠಿಗಳವರು ಮತ್ತು ಕಮಲಮ್ಮನವರ ಸೀಮಂತ ಪುತ್ರರಾದ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ತಾ॥ 2-6-1928 ರಲ್ಲಿ ಜನಿಸಿದರು. ಒಂಭತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಿಂದಲೇ ವೇದಾಧ್ಯಯನ ಕಾಲೋಚಿತಭಾಗಗಳನ್ನು ಅಭ್ಯಾಸ ಮಾಡಿದರು. 14ನೆಯ ವಯಸ್ಸಿನಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅದೇ ಸಂದರ್ಭದಲ್ಲಿ ಪಿತೃವಿಯೋಗವಾದ್ದರಿಂದ ಆಂಗ್ಲವಿದ್ಯಾಭ್ಯಾಸದಿಂದ ನಿವೃತ್ತರಾಗಿ ಬೇಲೂರಿನಲ್ಲಿ ಸಂಸ್ಕೃತಪಾಠಶಾಲೆಗೆ ಸೇರಿ ನಾಲ್ಕು ವರ್ಷಗಳ ಕಾಲ ಸಂಸ್ಕೃತಾಭ್ಯಾಸ ಮಾಡಿ ಚಂಪೂ ನಾಟಕ(ಸಾಹಿತ್ಯ) ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ 1947ರಲ್ಲಿ ಹೊಳೆನರಸೀಪುರಕ್ಕೆ ಬಂದು ಅಧ್ಯಾತ್ಮವಿದ್ಯಾನಿಲಯಕ್ಕೆ ಸೇರಿ ಐದು ವರ್ಷಗಳ ಕಾಲ ಶಾಂಕರವೇದಾಂತಾಧ್ಯಯನವನ್ನು ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರ ಸನ್ನಿಧಿಯಲ್ಲಿ ಅಭ್ಯಾಸಮಾಡಿ 1952 ರಲ್ಲಿ ಅಧ್ಯಾತ್ಮವಿದ್ಯಾಪ್ರವೀಣ ಎಂಬ ಪ್ರಶಸ್ತಿಯನ್ನು ಪಡೆದರು. ಅನಂತರ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿಯೇ ಪಂಡಿತರಾಗಿ ನೇಮಿಸಲ್ಪಟ್ಟು ಪಾಠ ಪ್ರವಚನಗಳು ಉಪನ್ಯಾಸಗಳು ಹಾಗೂ ಸಂಸ್ಥೆಯ ಆಡಳಿತ ವಿಭಾಗದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಾ ಈಗಲೂ ಸಂಸ್ಥೆಯಲ್ಲಿ ಸೇವಾತತ್ಪರರಾಗಿದ್ದಾರೆ.

ಅಧ್ಯಾತ್ಮಪ್ರಕಾಶಕಾರ್ಯಲಯದ ಸಂಸ್ಥಾಪಕರಾದ ಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು 1975 ರಲ್ಲಿ ಬ್ರಹ್ಮೀಭೂತರಾದ ಮೇಲೆ ಇವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಸಂಪಾದಕರೂ, ಲೇಖಕರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಅಧ್ಯಾತ್ಮಗ್ರಂಥಗಳ ಬರಹಗಾರರೂ ಪ್ರಕಾಶಕರೂ ಆಗಿಸೇವೆ ಸಲ್ಲಿಸುತ್ತಾ ಪ್ರಧಾನ ಕಾರ್ಯಾಲಯದಲ್ಲಿಯೇ ಕಳೆದ 48 ವರ್ಷಗಳಿಂದಲೂ ಸೇವಾನಿರತರಾಗಿದ್ದಾರೆ. ಶ್ರೀಶ್ರೀಗಳವರ ಕಾಲಾನಂತರ ಈವರೆಗೆ 29 ಅಧ್ಯಾತ್ಮಗ್ರಂಥಗಳನ್ನು ಹೊರತಂದಿದ್ದಾರೆ. ನಾಲ್ಕು ಪರ್ಯಾಯಗಳಲ್ಲಿ ಬ್ರಹ್ಮಸೂತ್ರ ಶಾಂಕರಭಾಷ್ಯದ ಮೇಲೆ 120 ಪ್ರವಚನಗಳನ್ನು ನೀಡಿದ್ದಾರೆ. ಇವು 108 ಕ್ಯಾಸೆಟ್‌ಗಳಲ್ಲಿ ಅಡಕವಾಗಿದ್ದು ಜನಪ್ರಿಯವಾಗಿವೆ. ಹೀಗೆ ಪೂಜ್ಯ ಶ್ರೀ ಶ್ರೀಗಳವರ ಶಿಷ್ಯರಲ್ಲಿಗಣ್ಯರಾಗಿದ್ದು ಈಗಲೂ ತಮ್ಮ ಅಮೋಘಸೇವೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ - ಎಂದು ತಿಳಿಸಲು ಸಂತೋಷಪಡುತ್ತೇವೆ.